ಸಂಪುಟ 01 । ಸಂಚಿಕೆ 155 । ಮಂಗಳವಾರ 28 ಏಪ್ರಿಲ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯಕ್ಕಾಗಿ ವಿಶ್ವ ದಿನ**

ಈ ದಿನವನ್ನು 2003 ರಿಂದ ಪ್ರತಿ ವರ್ಷ ಏಪ್ರಿಲ್ 28 ರಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್ಒ) ಆಚರಿಸುತ್ತಿದೆ. ಈ ದಿನವು ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯವನ್ನು ಹೇಗೆ ಸುಧಾರಿಸುವುದು ಎಂಬುದನ್ನು ಗುರುತಿಸುತ್ತದೆ ಮತ್ತು ತಂತ್ರಜ್ಞಾನ, ಜನಸಂಖ್ಯಾಶಾಸ್ತ್ರ, ಹವಾಮಾನ ಬದಲಾವಣೆ ಮುಂತಾದ ಹಲವಾರು ಬದಲಾವಣೆಗಳ ಮೂಲಕ ಈ ಪ್ರಯತ್ನಗಳನ್ನು ಮುಂದುವರಿಸಲು ನೋಡುತ್ತದೆ.

## ಸುಭಾಷಿತ

ನಮ್ಮ ಹಣೆಬರಹ ನಿರ್ಧರಿಸುವವರು ನಾವೇ. ಅದಕ್ಕಾಗಿ ಯಾರನ್ನೂ ದೂರಬಾರದು ಅಥವಾ ಯಾರನ್ನೂ ಶ್ಲಾಘಿಸಬಾರದು.

–ಸ್ವಾಮಿ ವಿವೇಕಾನಂದ

# ಜಿಬಿಎ ಚುನಾವಣೆಗೆ ಹಣವಿಲ್ಲ ಎನ್ನುವುದು ಸರ್ಕಾರದ ಆರ್ಥಿಕ ಪರಿಸ್ಥಿತಿಗೆ ಹಿಡಿದ ಕೈಗನ್ನಡಿ"

ಬೆಂಗಳೂರು: ಬಿಬಿಎಂಪಿ ರದ್ದು ಮಾಡಿ ರಚನೆ ಮಾಡಲಾಗಿರುವ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಐದು ಪಾಲಿಕೆಗಳಿಗೆ ಚುನಾವಣೆ ನಡೆಸಲು ಹಣದ ಕೊರತೆ ಇದೆ ಎಂಬ ಚುನಾವಣಾ ಆಯೋಗದ ಹೇಳಿಕೆ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಂತಿದೆ ಎಂದು ಬಿಜೆಪಿ ಮುಖಂಡ ಸತೀಶ್ ಉರಾಳ್ ಲೇವಡಿ ಮಾಡಿದ್ದಾರೆ.

ಬಿಬಿಎಂಪಿಯಿಂದ ಜಿಬಿಎ ಪಂಚ ಪಾಲಿಕೆಗಳು ಆಗಿವೆ. ಸ್ಥಳೀಯ ಜನಪ್ರತಿನಿಧಿಗಳ ಆಡಳಿತ ಕೊನೆಗೊಂಡು 5ವರ್ಷ 7ತಿಂಗಳಾಯಿತು.ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಇಲ್ಲದೇ ಇರುವುದರಿಂದ ಬೆಂಗಳೂರು ನಗರದ ಅಭಿವೃದ್ದಿಯ ವೇಗ ಕುಂಠಿತವಾಗಿದೆ. ಕಾನೂನಿನ ಅನ್ವಯ ಆರು ತಿಂಗಳು ಮಾತ್ರ ಆಡಳಿತಾಧಿಕಾರಿ ಅಧಿಕಾರ ಮಾಡಬಹುದು ಅದರೆ ಆರು ವರ್ಷವಾಗುತ್ತ ಬಂತು




ಚುನಾವಣೆ ಎಂಬುದು ನೆನಗುದಿಗೆ ಬಿದ್ದಿದೆ.

ಸುಪ್ರಿಂಕೋರ್ಟ್ ಆದೇಶ ನೀಡಿದೆ ಮತ್ತು ಪದೇ, ಪದೇ ಕೋರ್ಟ್ ಬರಬೇಡಿ ಎಂದು ಎಚ್ಚರಿಕೆ ನೀಡಿದೆ. ಈಗ ನೋಡಿದರೆ ಆರ್ಥಿಕ ಸೌಲಭ್ಯವಿಲ್ಲ, ಸಿಬ್ಬಂದಿಗಳು ಇಲ್ಲ ಗಣತಿ ಕಾರ್ಯ ನಡೆಯುತ್ತಿದೆ ಎಂದು ಆಫಿಡೆವಿಟ್ ಹಾಕಿದ್ದಾರೆ.ಬೆಂಗಳೂರು ನಗರ ಅತಿ ಹೆಚ್ಚು ಅದಾಯ ತರುವ ನಗರವಾಗಿದೆ. ರಾಜ್ಯ ಸರ್ಕಾರದ ಉಪಮುಖ್ಯಮಂತ್ರಿಗಳು ಉಸ್ತುವಾರಿ ಹೊಣೆ ಹೊತ್ತಿದ್ದಾರೆ.ಜಿಬಿ-ಎಯಲ್ಲಿ ಆರ್ಥಿಕ ಸಬಲರಾಗಿದ್ದೇವೆ ಎಂದು ಜಂಭ ಕೊಚ್ಚಿಕೊಳ್ಳುತ್ತಾರೆ. ಈಗ ನೋಡಿದರೆ ಚುನಾವಣೆ ನಡೆಸಲು ನಮ್ಮ ಬಳಿ ಹಣವಿಲ್ಲ ಎಂದು ಸಬೂಬು ನೀಡುತ್ತಿದ್ದಾರೆ.

ಬೆಂಗಳೂರು ನಗರದ ನಾಗರಿಕರು ಇದು ಒಂದು ಹಾಸ್ಯಸ್ಪದ ಸಂಗತಿ ಎಂದು ಜಿಬಿಎ ಮತ್ತು ಚುನಾವಣೆ ಆಯೋಗ ವಿರುದ್ದ ಕಿಡಿಕಾರುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಇರಬೇಕು ಅದರೆ ಚುನಾವಣೆ ನಡೆಸದೇ ರಾಜ್ಯ ಸರ್ಕಾರದ ಜೊತೆಯಲ್ಲಿ ಚುನಾವಣೆ ಆಯೋಗ ಕಣ್ಣ ಮುಚ್ಚಾಲೆ ಆಟವಾಡುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

## ಜೆಸ್ಕಾಂ: ಏಪ್ರಿಲ್ 29ರಂದು ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

ರಾಯಚೂರು ಏಪ್ರಿಲ್ 27 (ಕರ್ನಾಟಕ ವಾರ್ತೆ): ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ಯರಗೇರಾ ವಿದ್ಯುತ್ ಉಪ ಕೇಂದ್ರದ ಯರಗೇರಾ, ಮಲ್ಲಾಪೂರು, ಎಲ್.ಕೆ.ದೊಡ್ಡಿ, ಜಂಬಲದಿನ್ನಿ ಫೀಡರ್‌ಗಳಲ್ಲಿ ತುರ್ತು ನಿರ್ವಹಣ ಕಾರ್ಯ ಹಮ್ಮಿಕೊಂಡಿರು.




ಪ್ರಯುಕ್ತ ಏಪ್ರಿಲ್ 29ರ ಬುಧವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್‌ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ 'ಕಾರ್ಯನಿರ್ವಾಹಕಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲಿಂ. ಬಸಮ್ಮ ಬಿ. ಕೊನೇಕ ಪುಣ್ಯ ಸ್ಮರಣೋತ್ಸವ ನಿಮಿತ್ಯ ನೀಡುವ ಬಸವ ಸಿರಿ ಪ್ರಶಸ್ತಿಗೆ ಹುಲಸೂರು ಶ್ರೀಗಳು ಆಯ್ಕೆ



ನೈಜ್ಯ ದೆಸೆ ನ್ಯೂಸ್

ಕಲಬುರಗಿ: ಬಸವ ಪ್ರಕಾಶನ ವತಿಯಿಂದ ನೀಡಲ್ಪಡುವ ಲಿಂ. ಶ್ರೀಮತಿ ಬಸಮ್ಮ ಬಿ. ಕೊನೇಕ ಅವರ ಪುಣ್ಯ ಸ್ಮರಣೋತ್ಸವ ನಿಮಿತ್ಯ ನೀಡಲ್ಪಡುವ 2026 ನೇ ಸಾಲಿನ ರಾಜ್ಯ ಮಟ್ಟದ ಬಸವ ಸಿರಿ ಪ್ರಶಸ್ತಿಗೆ ಹುಲಸೂ-ರಿನ ಗುರು ಬಸವೇಶ್ವರ ಸಂಸ್ಥಾನ ಮಠದ ಮ. ನಿ. ಪ್ರ.ಶ್ರೀ ಶಿವಾನಂದ ಮಹಾಸ್ವಾಮಿಗಳು ಆಯ್ಕೆ ಮಾಡಲಾಗಿದೆ.

ಬಸವತತ್ವ ಪ್ರಚಾರ ಮಾಡಿದ ಬಸವ ತತ್ವ ಅನುಯಾಯಿಯಾಗಿ ಭಾರತ ದೇಶದ ತುಂಬಾ ಬಸವ ಪ್ರಸಾರ ಮಾಡಿದವರು.ಬೀದರ ಜಿಲ್ಲೆಯ ಪ್ರಥಮ ಆಧುನಿಕ ವಚನಕಾರರು.ಕವಿಗಳು ಸಾಹಿತ್ಯ ಮತ್ತು ಬಸವ ತತ್ವ ಸೇವೆಗೆ ಈ ಪ್ರಶಸ್ತಿ ಸಂದಿದೆ.ಹನ್ನೊಂದು ಸಾವಿರ ನಗದು ಮತ್ತು ಪ್ರಶಸ್ತಿ ಫಲಕದೊಂದಿಗೆ ಸನ್ಮಾನಿಸಿ ಪ್ರದಾನ ಮಾಡಲಾಗುವುದು. ಮೇ 1ರಂದು ಬೆಳಿಗ್ಗೆ 10 ಗಂಟೆಗೆ ಸೂಪರ ಮಾರ್ಕೆಟನಲ್ಲಿರುವ ಚೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ಹಮ್ಮಿಕೊಂಡ ಕಾಯಕ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕ-ರಿಸಲು ಅವ್ಹಾನ ನೀಡಲಾಯಿತು ಎಂದು ಬಸವರಾಜ ಕೊನೇಕ ಅವರು ತಿಳಿಸಿದ್ದಾರೆ.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಆರ್.ಆರ್.ಬಿರಾದಾರ ಡಾ.ಸಿ.ಆರ್. ಚಂದ್ರಶೇಖರ ಅವರು ನಾಲ್ಕು ಹಾಗೂ ಶರಣಬಸಪ್ಪ ವಡ್ಡನಕೇರಿ ಸಂಪಾದಿತ ಕಾಯಕ ಶರಣರು ಸೇರಿದಂತೆ ಐದು ಕೃತಿಗಳ ಲೋಕಾರ್ಪಣೆ ಮಾಡಿ ಪ್ರಶಸ್ತಿ ಪ್ರದಾನ ಮಡುವರು.ಕೃತಿಗಳ ಪರಿಚಯವನ್ನು ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಲ ಮಾಡುವರು. ಮುಖ್ಯ ಅತಿಥಿ ಯಾಗಿ ಸಾಹಿತಿ ಡಾ.ಕಾವ್ಯಶ್ರೀ ಮಹಾಗಾಂವಕರ ಆಗಮಿಸುವರು.

ಪ್ರೊ.ಶಿವರಾಜ ಪಾಟೀಲ ಅವರು ಪ್ರಾಸ್ತಾವಿಕ ನುಡಿಗಳನ್ನಾಡಲಿರುವ ಕಾರ್ಯಕ್ರಮದ ಅಧ್ಯಕ್ಷತೆ ಪ್ರಕಾಶಕ ಡಾ.ಬಸವರಾಜ ಕೊನೇಕ ವಹಿಸುವರು ಇದೇ ಸಂದರ್ಭದಲ್ಲಿ ಎಸ್. ಎಸ್. ಎಲ್. ಸಿ ಯಲ್ಲಿ ರಾಜ್ಯಕ್ಕೆ ಮೂರನೇ ರಾಂಕ್ ಪಡೆದ ಕುಮಾರ ಗಣೇಶ ಸಹದೇವ ಬೋಸ್ಲೆ ಹಾಗೂ ಪಿಯುಸಿಯಲ್ಲಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲನೆ ರಾಂಕ್ ಪಡೆದ ಕುಮಾರಿ ಸೃಷ್ಟಿ ಪಾಟೀಲ ಅವರನ್ನು ಗೌರವಿಸಲಾಗುತ್ತಿದ್ದು. ಎಂದು ಶ್ರೀ ಸಿದ್ದಲಿಂಗ ಬಿ. ಕೊನೆಕ್ ಹಾಗೂ ಶ್ರೀ ಶರಣು ಬಿ. ಕೊನೆಕ್ ಅವರು ಜಂಟಿಯಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಾಲಾಪೂರ:ಭಾರಿ ಪ್ರಮಾಣದಲ್ಲಿ ಸಿಡಿಲು ತೆಂಗಿನಮರ ಭಸ್ಮ, ಯಾವುದೇ ಅಪಾಯವಿಲ್ಲ

ನೈಜ್ಯ ದೆಸೆ ನ್ಯೂಸ್

ಒಂದು ಕಡೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಿಸಿಲಿನ ಜಳ, ಶಕೆ, ತಾಪಮಾನ ಒಂದು ಕಡೆಯಾದರೆ, ಅಷ್ಟೇ ಪ್ರಮಾಣದಲ್ಲಿ ಗಾಳಿ, ಗುಡುಗು ಸಿಡಿಲು ಅರ್ಭಟ ಲೆಕ್ಕವಿಲ್ಲದಷ್ಟು ಬರುತ್ತಿದ್ದು, ಇಂದು ಸಂಜೆ ಮಸ್ಕಿ ತಾಲೂಕ ಹಾಲಾಪೂರ ಗ್ರಾಮದ ಹುಲುಗಪ್ಪ ಬೋವಿ ಹಾಗೂ ರಾರಾಯಪ್ಪ ಮನೆ ಮಧ್ಯ ಇರುವ ತೆಂಗಿನ ಮರಕ್ಕೆ ಸಿಡಿಲು ಹೊಡೆದು ತೆಂಗಿನ ಮರ ಕೆಲ ಕಾಲ ಬೆಂಕಿಂ-ಯ ಕೆಂಪು ಕೆಂಡ ಉರಿದು ಹೋಯಿತು, ಅಕ್ಕ ಪಕ್ಕದ ಮನೆಯವರು



ದಿಬ್ಬಾಂತರಾದರು ಆದರೆ ಅದೃಷ್ಟವಶ ಯಾವುದೇ ರೀತಿಯ ನಷ್ಟ ಹಾನಿ ಸಂಭವಿಸಿಲ್ಲ ಎಂದು ಸಮೀಪದ ಮನೆಯ ಮಹಡಿಯ ಮೇಲೆ ಕುಳಿತಿದ್ದ ಪ್ರತ್ಯಕ್ಷಧರಿಸಿ ಕರಿಯಪ್ಪ ಬೆಂಗಳೂರು ಮಾತನಾಡಿ ಬಹಳಭಯಾನಕ ರೀತಿಯಲ್ಲಿ ಸಿಡಿಲು ನಮ್ಮ ಮನೆಯ ಪಕ್ಕದಲ್ಲಿ ಬಿದ್ದಿದ್ದು ನೋಡಿ ಒಂದು ಕ್ಷಣ ಮಾತೆ ಬರ್ಲಿಲ್ಲ,

ಇದು ನಿಜಕ್ಕೂ ಭಯಾನಕ, ಆದರೆ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಹೇಳಿದರು. ಹಾಗೆ ಯದ್ದಲದಿನ್ನಿಯ ಮುದುಕಣ್ಣ ಕುಂಬಾರ ಮನೆಯ ಮುಂದಿರುವ ತೆಂಗಿನ ಮರಕ್ಕೆ ಸಿಡಿಲು ಹೊಡೆದು ಅಲಿಯು ಸಹ ತೆಂಗಿನ ಮರ ಸುಟ್ಟು ಕರಕಲಾಗಿದೆ, ಆದರೆ ದುರಂತ ಸಂಭವಿಸಿಲ್ಲ.

## ಮಹಿಳೆಯರಿಗೆ ನೌಕರಿ ಆಮಿಷ ತೋರಿಸಿ ವೇಶ್ಯಾವಾಟಿಕೆ ಜಾಲ ಬಯಲು

ನೈಜ್ಯ ದೆಸೆ ನ್ಯೂಸ್

**ಮಾನ್ವಿ : ಕೆಲಸ ಕೊಡಿಸುವ ಆಮಿಷವೊಡ್ಡಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ದೂಡುತ್ತಿದ್ದ ಅಕ್ರಮ ಜಾಲವನ್ನು ಮಾನ್ವಿ ಪೊಲೀಸರು ಬಯಲಿಗೆಳೆದಿದ್ದಾರೆ ಎಂದು ಡಿಎಸ್ಪಿ ಚಂದ್ರಶೇಖರ್ ನಾಯಕ್ ತಿಳಿಸಿದ್ದಾರೆ.**

ಹಿರೇ ಕೊಟ್ಟಕಲ್ ಬ್ಯಾಗವಾಟ್ ರಸ್ತೆಯ ಕೆನಾಲ್ ಸಮೀಪದ ಹೊಲದಲ್ಲಿ ನಡೆಯುತ್ತಿದ್ದ ದಂಧೆಯ ಮೇಲೆ ಶನಿವಾರ ರಾತ್ರಿ ದಾಳಿ ನಡೆಸಿ ಕಿಂಗ್‌ಪಿನ್ ತಾಯಪ್ಪ ಸೇರಿದಂತೆ ಒಟ್ಟು 11 ಆರೋಪಿಗಳನ್ನು ಬಂಧಿಸಲಾಗಿದೆ ಎಂದರು.



ಕೆಲಸದ ಹುಡುಕಾಟದಲ್ಲಿದ್ದ ಬಡ ಹಾಗೂ ಮಧ್ಯಮ ವರ್ಗದ ಮಹಿಳೆಯರನ್ನು ಗು-ರಿಯಾಗಿಸಿಕೊಂಡು ಹೆಚ್ಚಿನ ಸಂಬಳದ ಉದ್ಯೋಗ ಕೊಡಿಸುವುದಾಗಿ ನಂಬಿಸಿ, ಬಳಿಕ ಅವರನ್ನು ವೇಶ್ಯಾವಾಟಿ-ಕೆಗೆ ದೂಡುತ್ತಿದ್ದ ಜಾಲ ಇದಾಗಿದ್ದು, ಖಚಿತ ಮಾಹಿತಿಯ ಆಧಾರದ ಮೇಲೆ ಪೊಲೀಸರು ದಾಳಿ ನಡೆಸಿ ಇಬ್ಬರು ಸಂತ್ರಸ್ತೆಯರನ್ನು ರಕ್ಷಿಸಿ ಸಾಂತ್ವನ ಕೇಂದ್ರಕ್ಕೆ ಕಳುಹಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಾಚರಣೆಯಲ್ಲಿ ಪಿ.ಐ ಸೋಮಶೇಖರ ಎಸ್ ಕೆಂಚರೆಡ್ಡಿ, ಪಿಎಸ್‌ಐ ಅಜೀರ್, ಎ.ಎಸ್.ಐ ಹನುಮೇಶ್, ಹುಸೇನ್ ಸಾಬ್, ಬಸನಗೌಡ, ಸೂಗಪ್ಪ, ಚರಣ, ಪ್ರಕಾಶ್ ಸೇರಿದಂತೆ ಮಾನ್ವಿ ಪೊಲೀಸ್ ಠಾಣೆಯ ಕ್ರೈಂ ಬ್ರಾಂಚ್ ತಂಡ ಭಾಗವಹಿಸಿತು.

## ಬಡ ರೋಗಿಗಳನ್ನು ಬಂಧುಗಳಂತೆ ನೋಡಿಕೊಳ್ಳುತ್ತಿದ್ದರು ಡಾ. ತಿಮ್ಮನಗೌಡ :ಡಾ. ಚನ್ನಬಸವ ಸ್ವಾಮಿ ಹಿರೇಮಠ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸುಮಾರು ವರ್ಷಗಳಿಂದ ಬಡ ರೋಗಿಗಳಿಗೆ ಅಲ್ಪ ಹಣದಿಂದ ಚಿಕಿತ್ಸೆ ನೀಡುತ್ತಿದ್ದ ಬಡವರ ಭಾಗ್ಯದಾತರಾಗಿದ್ದ ಡಾ. ತಿಮ್ಮನಗೌಡ ಅವರ ಪುಣ್ಯಾರಾಧನೆಯನ್ನು ಅವರ ಧರ್ಮಪತ್ನಿವರಾದ ಪಾರ್ವತಮ್ಮ ಮತ್ತು ಅವರ ಅಪಾರ ಕುಟುಂಬ ವರ್ಗದಿಂದ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಕೂಡ ಆರನೇ ವರ್ಷದ ಪುಣ್ಯರಾಧನೆಯನ್ನು ಆಶ್ರಮದಲ್ಲಿ ಇಡೀ ದಿನ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ದಿ. ಡಾ. ತಿಮ್ಮನಗೌಡ ಅವರ ಧರ್ಮಪತ್ನಿವರಾದ



ಪಾರ್ವತಮ್ಮ ಅಮ್ಮನವರನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮಸಿಂಧನೂರಿನ ದಿ. ಡಾ. ತಿಮ್ಮನಗೌಡ ಅವರ ಸೇವೆ ಸಮಾಜಕ್ಕೆ ಅಪಾರವಾದುದು. ಬಡವರ ವೈದ್ಯರಿಂದ ಹೆಸರಾಗಿದ್ದ ಅವರು ಬಡ ರೋಗಿಗಳಿಗೆ ಅಲ್ಪ ಹಣದಲ್ಲಿ ತಪಾಸಣೆ ಹಾಗೂ ಚಿಕಿತ್ಸೆ ಮಾಡುತ್ತಿದ್ದರು. ಬರಿ ಇವರು ಆರೋಗ್ಯ ಕ್ಷೇತ್ರದಲ್ಲದೆ ಶಿಕ್ಷಣ ಕ್ಷೇತ್ರದಲ್ಲಿಯೂ ಕೂಡ ತಮ್ಮದೇ ಆದಂತಹ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದ್ದರು.

ಇಂತಹ ಇವರ ಆದರ್ಶ ವ್ಯಕ್ತಿತ್ವವನ್ನು ಅವರ ಕುಟುಂಬವೂ ಕೂಡ ಮೈಗೂಡಿಸಿಕೊಂಡು. ತೆರೆಯ ಹಿಂದೆ ಹಲವಾರು ಸಮಾಜ ಪ್ರಕಾರಗಳನ್ನು ಮಾಡುತ್ತಿದ್ದಾರೆ. ಬಡ ರೋಗಿಗಳನ್ನು ಬಂಧುಗಳಂತೆ ನೋಡಿಕೊಳ್ಳುತ್ತಿದ್ದರು ನಮ್ಮ ಈ ವೈದ್ಯರು ಇವರು ನಮ್ಮನ್ನೆಲ್ಲ ಅಗಲಿದರೂ ಸಹ ಅವರ ಕುಟುಂಬ ನೊಂದವರ ನಾಡಿಮಿಡಿತವಾಗಿ ಅನಾಥ ಜೀವಿಗಳ ಆರಾಧ್ಯ ದೈವವಾಗಿ ಕಾರುಣ್ಯ ಆಶ್ರಮಕ್ಕೆ ಬೆನ್ನೆಲುಬಾಗಿದೆ. ನಾವು ಕೂಡ ಚಿಕ್ಕಂದಿನ ದಿನಗಳಲ್ಲಿ ಈ ವೈದ್ಯರನ್ನು ನೋಡಿದ್ದೇವೆ ಇವರ ಸರಳತೆ ಸಾಮಾನ್ಯ ವ್ಯಕ್ತಿತ್ವ ಇವರು ಹೇಳುತ್ತಿರುವ ಧೈರ್ಯ ಅದೆಷ್ಟೋ ರೋಗಿಗಳ ಬಾಳಿಗೆ ಪುನರ್ಜನ್ಮ ನೀಡಿತ್ತು. ಇವರು ಅಗಲಿದ ಈ ದಿನದಂದು ಪ್ರತಿ ವರ್ಷದ ಪುಣ್ಯರಾಧನೆ ಕಾರುಣ್ಯ ಆಶ್ರಮದಲ್ಲಿ ನೆರವೇರಿಸುತ್ತಿರುವುದು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತದೆ.

ಇವರಿಗೆ ಭಗವಂತ ನಿರಂತರ ಆತ್ಮ ಶಾಂತಿಯನ್ನು ಕರುಣಿಸಿ ಅವರ ಕುಟುಂಬಕ್ಕೂ ಮತ್ತು ನಮ್ಮೆಲ್ಲರಿಗೂ ಈ ವೈದ್ಯರ ಆಗಲಿಕೆ ನೋವು ಭರಿಸುವಂತಹ ಶಕ್ತಿಯನ್ನು ಕರುಣಿಸಲಿ ಎನ್ನುವ ಪ್ರಾರ್ಥನೆ ಕಾರುಣ್ಯ ಕುಟುಂಬದ ಎಂದು ಭಾವನಾತ್ಮಕವಾಗಿ ಮಾತನಾಡಿ. ದಿವಂಗತ ಡಾ.ತಿಮ್ಮನಗೌಡ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರ ಕುಟುಂಬದ ಹಿರಿಯರಾದ ಪಾರ್ವತಮ್ಮ. ವಿಜಯಕುಮಾರ. ಡಾ. ಶಿಲ್ಪಾ. ಅನ್ವಿ. ಹಾಗೂ ಶ್ರೀ ಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ.ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ ಸಿದ್ದಯ್ಯ ಸ್ವಾಮಿ. ಮರಿಯಪ್ಪ.ಜ್ಯೋತಿ. ಮೀನಾಕ್ಷಮ್ಮ. ಲಕ್ಷ್ಮಿ. ಅನೇಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಅನುಮಾನ ಮತ್ತ ಅವಮಾನ

ಅನುಮಾನ ಅಂದ್ರೆ ಮನಸ್ಸಿನ ಕ್ಯಾನ್ಸರ್ ಗುರು
ನಂಬಿಕೆ ಅನ್ನೋ ಜೀವಕೋಶಾನ ತಿನ್ನುತ್ತೆ
ಕಣ್ಣೆದುರೇ ಸತ್ಯ ಇದ್ರೂ ಕಾಣದಂತೆ ಮಾಡುತ್ತೆ
ಸಂಬಂಧದ ಬೇರಿಗೆ ನಿಧಾನಕ್ಕೆ ಬೆಂಕಿ ಇಡುತ್ತೆ

ಅವಮಾನ ಅಂದ್ರೆ ಕತ್ತಿಯಂಥ ಪದ ಕಣೋ
ಒಂದು ಸಲ ಇರಿದರೆ ಆ ಗಾಯ ಮಾಸಲ್ಲ
ಮೈಮೇಲೆ ಗಾಯ ಆದ್ರೆ ಮದ್ದು ಸಿಗುತ್ತೆ
ಮನಸ್ಸಿಗೆ ಆದ ಗಾಯಕ್ಕೆ ಮದ್ದೇ ಇಲ್ಲ ಗುರು

ಅನುಮಾನ ಬಂದರೆ ಕೇಳಿಬಿಡು ನೇರವಾಗಿ
ಅವಮಾನ ಮಾಡಿದರೆ ಎದುರಿಸಿ ನಿಂತುಬಿಡು
ಮೌನವಾಗಿದ್ರೆ ಮನಸ್ಸು ಕೊಳೆಯುತ್ತೆ
ಮಾತಾಡಿದರೆ ಮಾತ್ರ ಮನಸ್ಸು ತಿಳಿಯುತ್ತೆ

ನೆನಪಿರಲಿ ಗುರು ಈ ಒಂದು ಮಾತು:
ಅನುಮಾನ ಪಟ್ಟವನು ಸೋತ
ಅವಮಾನ ಮಾಡಿದವನು ಕೆಟ್ಟ
ಸಹಿಸಿಕೊಂಡು ನಿಂತವನೇ ಗೆದ್ದ
ಯಾಕಂದ್ರೆ ಅವನೇ ನಿಜವಾದ ಗಂಡು ?

ಎಸ್. ದುರಗಪ್ಪ. ಕುಷ್ಟಗಿ.

## ನಾರಿ ಶಕ್ತಿ ವಂದನಾ ವಿರೋಧಿಸಿದ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ವಿರುದ್ಧ ಬಿಜೆಪಿ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ತಾಲೂಕು ಬಿಜೆಪಿ ಪಕ್ಷದಿಂದ ಮುಖಂಡ ಕೆ.ಕರಿಯಪ್ಪ ಅಧ್ಯಕ್ಷತೆಯಲ್ಲಿ ಹಾಗೂ ಮಹಿಳಾ ಮಂಡಲದ ಅಧ್ಯಕ್ಷರ ನೇತೃತ್ವದಲ್ಲಿ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಜಾರಿಯಾಗದಂತೆ ತಡೆದ ಮಹಿಳಾ ಮೀಸಲಾತಿ ಮಸೂದೆಯನ್ನು ಮಹಿಳಾ ವಿರೋಧಿ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ವಿರುದ್ಧ ಏ.27 ಸೋಮವಾರದಂದು ಬೃಹತ್ ಪ್ರತಿಭಟನೆ ನಡೆಸಲಾಯಿತು.**

ನಗರದ ಪ್ರವಾಸಿ ಮಂದಿರದಿಂದ ತಹಶೀಲ್ದಾರ್ ಕಚೇರಿಯವರೆಗೆ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಬಿಜೆಪಿ ಮುಖಂಡ ಕೆ.ಕರಿಯಪ್ಪ




ಅವರು, ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗದಂತೆ ತಡೆದ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಮಹಿಳಾ ವಿರೋಧಿಯ ಧೋರಣೆ ಅನುಸರಿಸಿವೆ. ಈ ದೇಶದ ಮಹಿಳೆಯರಿಗೆ ಸಿಗುವ ಗೌರವವನ್ನು ಹಾಳು ಮಾಡಿದ್ದಾರೆ. ಗಂಡಿನಷ್ಟೇ ಸಮಬಲವಾದ ಮಹಿಳೆಯರಿಗೆ ಅನ್ಯಾಯ ಮಾಡುವ ಮೂಲಕ ಅಗೌರವ ತೋರಿದ್ದು ಖಂಡನೀಯ ಎಂದರು.

ಈ ಪ್ರತಿಭಟನೆಯಲ್ಲಿ: ಮುಖಂಡರಾದ ಕೆ.ರಾಜಶೇಖರ, ಎಂ.ದೊಡ್ಡಬಸವರಾಜ, ಗ್ರಾಮೀಣ ಮಂಡಲದ ಅಧ್ಯಕ್ಷ ಯಂಕೋಬ ನಾಯಕ್ ರಾಮತ್ನಾಳ್, ನಗರ ಮಂಡಲ ಅಧ್ಯಕ್ಷ ಸಿದ್ದರಾಮೇಶ ಮನ್ನಾಪೂರು, ಸಿರಾಜ್ ಪಾಷಾ, ಜಗದೀಶ್ ಕೆ, ಶಿವು, ಫಕೀರಪ್ಪ ಬಾಗೋಡಿ, ಮಹಿಳಾ ಮುಖಂಡರಾದ ಸಹನಾ ಹಿರೇಮಠ, ಮಮತಾ ಹಿರೇಮಠ, ನಂದಿನಿ ಮೆರನಾಳ, ಶೈಲಜಾ ಷಡಕ್ಷರಪ್ಪ, ಕವಿತಾ ಹಿರೇಮಠ, ರಮೇಶ, ಚಾಂದ್ ಪಾಷಾ, ರಾಜು ಅಡವಿಭಾವಿ, ನಬಿಸಾಬ್, ರವಿ ರಾಠೋಡ್, ಸೇರಿದಂತೆ ಕಾರ್ಯಕರ್ತರು, ಅನೇಕ ಮುಖಂಡರು ಇದ್ದರು.

## ಜೇವರ್ಗಿಯಲ್ಲಿ ಶ್ರೀರಾಮ ಸೇನೆಯಿಂದ ಗೋಹತ್ಯೆ ನಿಷೇಧಕ್ಕೆ ಆಗ್ರಹಿಸಿ ಬೃಹತ್ ಪ್ರತಿಭಟನೆ

## ಹಿಂದೂ ಸಂಸ್ಕೃತಿ ಉಳಿವಿಗಾಗಿ ನಮ್ಮ ಹೋರಾಟ ನಿರಂತರ : ಆನಂದ ದೇಸಾಯಿ

ನೈಜ್ಯ ದೆಸೆ ನ್ಯೂಸ್

**ಜೇವರ್ಗಿ: ಸಂಪೂರ್ಣ ದೇಶಾದ್ಯಂತ ಗೋಹತ್ಯೆ ನಿಷೇಧಿಸಬೇಕು ಹಾಗೂ ಗೋಮಾತೆಯನ್ನು ರಾಷ್ಟ್ರ ಮಾತೆಯಾಗಿ ಘೋಷಿಸಬೇಕು ಎಂದು ಆಗ್ರಹಿಸಿ ಜೇವರ್ಗಿ ತಾಲೂಕಿನಲ್ಲಿ ಇಂದು ಶ್ರೀರಾಮ ಸೇನೆ ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು.**

ತಾಲೂಕು ಅಧ್ಯಕ್ಷರಾದ ಆನಂದ ದೇಸಾಯಿ ಅವರ ನೇತೃತ್ವದಲ್ಲಿ, ಪ್ರವಾಸಿ ಮಂದಿರದಿಂದ ತಹಶೀಲ್ದಾರ್ ಕಚೇರಿ ವರೆಗೆ ಕಾರ್ಯಕರ್ತರು ಸುಡು ಬಿಸಿಲನ್ನೂ ಲೆಕ್ಕಿಸದೇ ಮೆರವಣಿಗೆ ನಡೆಸಿದರು. ಈ ವೇಳೆ "ಗೋಮಾತಾ ಕೀ ಜಯ", "ಜೈ ಮಾತಾ" ಎಂಬ ಘೋಷಣೆಗಳನ್ನು ಕೂಗಿ ತಮ್ಮ ಬೇಡಿಕೆಗಳನ್ನು ವ್ಯಕ್ತಪಡಿಸಿದರು. ಪ್ರತಿಭಟನೆ ನಂತರ ತಹಶೀಲ್ದಾರ್ ಅವರಿಗೆ




ಶ್ರೀರಾಮ ಸೇನೆ ತಾಲೂಕ ಘಟಕದ ವತಿಯಿಂದ ಮನವಿ ಪತ್ರಿ ನೀಡುತ್ತಿರುವುದು

ಮನವಿ ಪತ್ರ ಸಲ್ಲಿಸಲಾಯಿತು. ಮನವಿಯಲ್ಲಿ ದೇಶಾದ್ಯಂತ ಗೋಹತ್ಯೆ ಸಂಪೂರ್ಣ ನಿಷೇಧಿಸುವಂತೆ ಹಾಗೂ ಗೋಮಾತೆಗೆ ರಾಷ್ಟ್ರ ಮಾತೆಯ ಸ್ಥಾನಮಾನ ನೀಡುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಶ್ರೀರಾಮ ಸೇನೆ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರು ಬಣಮಿಗಿ, ಮಂಜು ಗೌಡ್ ಪಾಟೀಲ್, ಪ್ರವೀಣ್ ಸುಬೇದಾರ್, ರಾಜು ಗುತ್ತೇದಾರ್, ಗಿರೀಶ್ ಗುತ್ತೇದಾರ್, ನವೀನ್ ಜೇವರ್ಗಿ, ಜೀವನ್ ಜೇವರ್ಗಿ, ಅಶೋಕ್ ಜೇರಟಗಿ ಸೇರಿದಂತೆ ಹಲವು ಕಾರ್ಯಕರ್ತರು ಭಾಗವಹಿಸಿದ್ದರು.

**ದೇಶಾದ್ಯಂತ ಗೋಹತ್ಯೆ ನಿಷೇಧಿಸಬೇಕು**

**ಗೋಮಾತೆಯನ್ನು "ರಾಷ್ಟ್ರ ಮಾತೆ"ಯಾಗಿ ಘೋಷಿಸಬೇಕು ನಮ್ಮ ಆಗ್ರಹ ಈಡೇರದಿದ್ದರೆ ರಾಜ್ಯ ಹಾಗೂ ದೇಶಾದ್ಯಂತ ಹಿಂದೂ ಸಂಘಟನೆಗಳು ಒಗ್ಗೂಡಿ ಬೃಹತ್ ಮಟ್ಟದ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ**

**–ಆನಂದ ದೇಸಾಯಿ ಶ್ರೀರಾಮ ಸೇನೆ ತಾಲೂಕ ಅಧ್ಯಕ್ಷ ಜೇವರ್ಗಿ**

## ಕೆನಡಾ ಬಿಟ್ಟು ತೊಲಗಿ ಎಂದು ಸಿಖ್ ವ್ಯಕ್ತಿ ಮೇಲೆ ಹಲ್ಲೆ

ನೈಜ್ಯ ದೆಸೆ ನ್ಯೂಸ್

**ಟೊರೊಂಟೊ: ಕೆನಡಾದಲ್ಲಿ ನನ್ನ ದೇಶದಿಂದ ಹೊರಹೋಗಿ ಎಂದು ಜನಾಂಗೀಯ ನಿಂದನೆ ಮಾಡಿದ ಯುವಕನೊಬ್ಬ ಸಿಖ್ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ್ದು, ಈ ದ್ವೇಷ ಪ್ರೇರಿತ ಹಲ್ಲೆ ಬಗ್ಗೆ ತನಿಖೆ ನಡೆಸಲು ಪೊಲೀಸರು ಮುಂದಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ಏ.22 ರಂದು ಒಂಟಾರಿಯೊದ ವುಡ್‌ಸ್ಟಾಕ್‌ನಲ್ಲಿ ನಡೆದಿದ್ದು, ಯುವಕನ ಮೇಲೆ ತನ್ನ ಕೃತ್ಯಕ್ಕಾಗಿ ಹಲವಾರು ಆರೋಪಗಳನ್ನು ಎದುರಿಸುತ್ತಿದ್ದಾನೆ ಎಂದು ವುಡ್‌ಸ್ಟಾಕ್ ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.**




ವೃದ್ಧ ವ್ಯಕ್ತಿ ಪಾದಚಾರಿ ಮಾರ್ಗದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಯುವಕನೊಬ್ಬ ಆತನನ್ನು ತಳ್ಳಿ ಆತನನ್ನು ಹೊಡೆದುರುಳಿಸಿದಾಗ ಈ ದಾಳಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಯುವಕರು ತಮ್ಮ ಜನಾಂಗೀಯತೆಯ ಆಧಾರದ ಮೇಲೆ ಬಲಿಪಶುವನ್ನು ಗುರಿಯಾಗಿಸಿಕೊಂಡು ಜನಾಂಗೀಯವಾಗಿ ಟೀಕಿಸಿದ ಕಾಮೆಂಟ್‌ಗಳು ಮತ್ತು ಅಶ್ಲೀಲ ಮಾತುಗಳನ್ನು ಕೂಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬಲಿಪಶು ದೈಹಿಕವಾಗಿ ಗಾಯಗೊಂಡಿಲ್ಲ ಎಂದು ಅದು ಹೇಳಿದೆ.ತನಿಖೆಯಲ್ಲಿ ಯುವಕರು ಅಪ್ರಚೋದಿತವಾಗಿ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಘಟನೆಯ ನಂತರ, ಯುವಕ ಶಾಲಾ ಪ್ರದೇಶದಿಂದ ನಿರ್ಗಮಿಸುವ ಮೊದಲು ಟರ್ಟಲ್ ಐಲ್ಯಾಂಡ್ ಶಾಲೆಯ ಆಸ್ತಿಗೆ ಬೇಲಿ ಹಾರಿದ್ದಾನೆ. ಘಟನೆಯ ಸಮಯದಲ್ಲಿ ಯಾವುದೇ ವಿದ್ಯಾರ್ಥಿಗಳಿಗೆ ಹಾನಿಯಾಗಿಲ್ಲ ಎಂದು ಹೇಳಿಕೆಯಲ್ಲಿ ಸೇರಿಸಲಾಗಿದೆ. ತನಿಖೆಯ ಪರಿಣಾಮವಾಗಿ, ದ್ವೇಷ ಪ್ರೇರಿತ ಹಲ್ಲೆಯ ನಂತರ ಯುವಕನನ್ನು ಬಂಧಿಸಲಾಯಿತು. ಆರೋಪಿಯನ್ನು ಜಾಮೀನು ವಿಚಾರಣೆಗಾಗಿ ಕಸ್ಟಡಿಯಲ್ಲಿ ಇರಿಸಲಾಗಿದೆ ಎಂದು ಅದು ಹೇಳಿದೆ.ಈ ಘಟನೆಯ ವೀಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗುತ್ತಿವೆ ಎಂದು ವುಡ್‌ಸ್ಟಾಕ್ ಪೊಲೀಸ್ ಸೇವೆಗೆ ತಿಳಿದಿದೆ, ಇದು ಯುವಕರು ನನ್ನ ದೇಶದಲ್ಲಿ ನೀವು ಏನು ಮಾಡುತ್ತಿದ್ದೀರಿ? ಸೇರಿದಂತೆ ಜನಾಂಗೀಯ ನಿಂದನೆಯನ್ನು ಪದೇ ಪದೇ ಕೂಗುತ್ತಿರುವುದನ್ನು ತೋರಿಸುತ್ತದೆ. ನೀವು ಇಲ್ಲಿಂದ ಬಂದವರಲ್ಲ, ನನ್ನ ದೇಶದಿಂದ ಹೊರಡಿ.ದ್ವೇಷದ ಕೃತ್ಯಗಳಿಗೆ ನಮ್ಮ ಸಮುದಾಯದಲ್ಲಿ ಸ್ಥಾನವಿಲ್ಲ. ಸಮುದಾಯದ ಎಲ್ಲಾ ಸದಸ್ಯರು ಸುರಕ್ಷಿತ ಮತ್ತು ರಕ್ಷಿತರಾಗಿರುವುದನ್ನು ಖಚಿತಪಡಿಸಿಕೊಳ್ಳಲು ವುಡ್‌ಸ್ಟಾಕ್ ಪೊಲೀಸ್ ಸೇವೆ ಬದ್ಧವಾಗಿದೆ. ದ್ವೇಷ ಪ್ರೇರಿತ ಘಟನೆಯನ್ನು ಅನುಭವಿಸಿದ ಅಥವಾ ವೀಕ್ಷಿಸಿದ ಯಾರಾದರೂ ಅದನ್ನು ಪೊಲೀಸರಿಗೆ ವರದಿ ಮಾಡಲು ನಾವು ಪ್ರೋತ್ಸಾಹಿಸುತ್ತೇವೆ ಎಂದು ಪೊಲೀಸರು ಹೇಳಿದರು. ವುಡ್‌ಸ್ಟಾಕ್ ಪೊಲೀಸ್ ಸೇವೆ ದ್ವೇಷ ಪ್ರೇರಿತ ಅಪರಾಧಗಳನ್ನು ಎಸಗುವವರನ್ನು ಹಿಂಬಾಲಿಸುತ್ತದೆ ಮತ್ತು ಹೊಣೆಗಾರರನ್ನಾಗಿ ಮಾಡುತ್ತದೆ.ಏತನ್ಮಧ್ಯೆ, ಎಕ್?ಸ ಹೇಳಿಕೆಯಲ್ಲಿ, ವಿಶ್ವ ಸಿಖ್ ಸಂಸ್ಥೆ ಘಟನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ ಮತ್ತು ಹಲ್ಲೆಯನ್ನು ಸ್ವೀಕಾರಾರ್ಹವಲ್ಲ ಎಂದು ಹೇಳಿದೆ.

## ಮದುವೆಗೆ ಯುವಕ ಪ್ರಧಾನಿಗೆ ಪತ್ರ ಆಹ್ವಾನ, ಅದಕ್ಕೆ ಸ್ಪಂದಿಸಿ, ಶುಭ ಕೋರಿ, ಪತ್ರ ಬರೆದು ಸರಳತೆ ಮೆರೆದ ಪ್ರಧಾನಿಯವರು

ನೈಜ್ಯ ದೆಸೆ ನ್ಯೂಸ್

**ಮಸ್ಕಿ ತಾಲೂಕಿನ ಕಾನಿಹಾಳ ಗ್ರಾಮದ ಯುವಕ ರಾಜೇಶ ನಾಯಕ ಕುರ್ಲಿ ಅವರ ಮದುವೆಯು ಸವಿತಾ ಎಂಬವರ ಜೊತೆ ನಿಗದಿಯಾಗಿತ್ತು.**

ತಮ್ಮ ಮದುವೆಗೆ ಆಹ್ವಾನ ಪತ್ರಿಕೆ ನೀಡುವ ಮೂಲಕ ವಿಶೇಷ ಮತ್ತು ವಿಭಿನ್ನವಾಗಿ ದೇಶದ ಪ್ರಧಾನಿಯವರೆಗೆ ಮದುವೆಯ ಸಂಭ್ರಮ ಸಡಗರಕ್ಕೆ ದೆಹಲಿಯ ಪ್ರಧಾನ ಮಂತ್ರಿ ಕಚೇರಿಗೆ ಸ್ವತಃ ಸ್ಪೀಡ್ ಪೋಸ್ಟ್ ಮಾಡುವ ಮೂಲಕ ಪತ್ರಿಕೆ ಕಳಿಸಿದ್ದರು, ಈ ಆಹ್ವಾನವನ್ನು ಸ್ವೀಕರಿಸಿದ ದೇಶದ ನೆಚ್ಚಿನ



प्रधानमंत्री
Prime Minister

New Delhi
चैत्र 26, शक संवत् 1948
16 April, 2026

Shri Rajesh Nayak Ji,

I thank you heartily for extending an invitation for your marriage. As you enter this auspicious moment, may all the blessings be with you and **Savitha** for a wonderful life ahead. Heartfelt gratitude for inviting me to the wedding ceremony.

May the couple's hearts, minds and actions be one. Being there by each other's side at all times, holding each other's hands in the quest to realise your dreams and aspirations, assuming responsibilities thoughtfully and affectionately. May you and Savitha be perfect partners in the voyage of life by accepting each other's imperfections and learning from each other's virtues.


I once again extend my greetings and best wishes to both of you for a long, happy and beautiful life together.

Warm regards,

Yours,

(Narendra Modi)

Shri Rajesh Nayak
Village- Kanihal
Post- Uppaladoddi
Taluk- Sindhanuru
District- Raichuru
Karnataka- 584128



ಪ್ರಧಾನ ಮಂತ್ರಿ ನರೇಂದ್ರ ಮೋದಿಜೀ ಅವರು ನವ ದಂಪತಿಗಳಿಗೆ ಶುಭ ಕೋರಿ, ನಿಮ್ಮ ದಾಂಪತ್ಯ ಜೀವನ ಸುಖಕರ ಆರೋಗ್ಯಕರ ಕೂಡಿರಲಿ ಎಂಬ ಸಂದೇಶದೊಂದಿಗೆ ಪತ್ರವನ್ನು ಕಳಿಸಿದ್ದು, ಪ್ರಧಾನಿಯಾಗಿ ದೇಶದ ಜವಾಬ್ದಾರಿ, ಒತ್ತಡ ಇದೆಲ್ಲದರ ಜೊತೆಗೆ ಒಬ್ಬ ಸಾಮಾನ್ಯ ಪ್ರಜೆಯ ಪತ್ರಕ್ಕೆ ಗೌರವ, ಮನ್ನಣೆ ಕೊಟ್ಟಿದ್ದು ಅವರ ಸರಳತೆ ಎದ್ದು ಕಾಣುತ್ತಿದೆ ಇದಕ್ಕೆ ರಾಜೇಶ ನಾಯಕ್ ಕುರ್ಲಿ ಮತ್ತು ಕುಟುಂಬಸ್ಥರು, ಗ್ರಾಮಸ್ಥರು ಸಂತೋಷ ಸಂಭ್ರಮ ಮನೆಮಾತಾಗಿದ್ದು ಈ ಸುದ್ದಿ ಜಿಲ್ಲೆಯಾದ್ಯಂತ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು ಖುಷಿಯ ವಿಚಾರ.

## ಮೇ 3ರಂದು ಸಾಮೂಹಿಕ ವಿವಾಹ 5001 ತಾಯಂದಿರಿಗೆ ಉಡಿತುಂಬುವ ಕಾರ್ಯಕ್ರಮ




ನೈಜ್ಯ ದೆಸೆ ನ್ಯೂಸ್

**ಬಸನಗೌಡ ಬಾದರ್ಲಿ ಫೌಂಡೇಶನ್ ವತಿಯಿಂದ ಮೇ 3 ರಂದು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಸೋಮವಾರದಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮೇ 3 ರಂದು ನಗರದ ತಾಲೂಕು ಕ್ರೀಡಾಂಗಣದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಂಡಿದ್ದು ಈಗಾಗಲೇ151 ಜೋಡಿಗಳು ಮದುವೆಗೆ ನೋಂದಣಿ ಆಗಿದ್ದು, ಇನ್ನೂ ಮೂರ್ನಾಲ್ಕು ದಿನದಲ್ಲಿ ಹೆಚ್ಚಾಗುವ ಸಾಧ್ಯತೆಯಿದ್ದು, ಅದು ಎಷ್ಟೇ ಜೋಡಿಗಳು ಬಂದರು ಸಹ ಉಚಿತ ಸಾಮೂಹಿಕ ವಿವಾಹ ಮಾಡಲಾಗುವುದು. ಈ ಉಚಿತ ಸಾಮೂಹಿಕ ವಿವಾಹದ ಜೊತೆಗೆ ತಾಲೂಕಿನಲ್ಲಿ ಶಾಂತಿ ನೆಲೆಸಲು ಸರಿ-ಸುಮಾರು 5 ಸಾವಿರ ಮೇಲ್ಪಟ್ಟ ತಾಯಂದಿರಿಗೆ ಉಡಿತುಂಬುವ ಕಾರ್ಯಕ್ರಮ ಹಾಗೂ ನಾನು ವಿಧಾನ ಪರಿಷತ್ ಶಾಸಕರಾದ ಮೇಲೆ ಕ್ಷೇತ್ರದಾದ್ಯಂತ ಮಾಡಿದ ಕೆಲಸ ಕಾರ್ಯಗಳ ಸಾಧನೆ ಬಗ್ಗೆ ಪುಸ್ತಕ ಕೈಪಿಡಿ ಹೊರ ತರಲಾಗುವುದು. ಅಂದು ಅಂದಾಜು 40 ರಿಂದ 50 ಸಾವಿರ ಜನ ಸೇರುವ ನೀರಿಕ್ಷೆ ಇದೆ.

ತುಂಗಭದ್ರ ಜಲಾಶಯದ 32 ಕ್ರಸ್ಟ್ ಗೇಟ್ ಗಳನ್ನು ಅಳವಡಿಸುವ ಉದ್ದೇಶದಿಂದ ಎರಡನೆಯ ಬೆಳೆಗೆ ನೀರು ನಿಲ್ಲಿಸಲಾಗಿದೆ ಆದ-'ಷ್ಟು ಬೇಗನೇ ಗೇಟ್ ಗಳನ್ನು ಕೂಡಿಸಿ ರೈತರಿಗೆ ಕಾಂಗ್ರೆಸ್ ಸರ್ಕಾರ ಅನೂಕೂಲ ಮಾಡಲಿದೆ. ಕ್ಷೇತ್ರದ ಜನರಿಗೆ ತೊಂದರೆಯಾಗಬಾರದು ಎಂಬ ಸದುದ್ದೇಶದಿಂದ ಉಚಿತ ಸಾಮೂಹಿಕ ವಿವಾಹ ಮಾಡಿಕೊಡಲಾಗುವುದು. ಕ್ಷೇತ್ರದ ಮತದಾರರು ಮದುವೆಯಾಗದೆ ಇರುವವರಿಗೆ ಉಚಿತ ಸಾಮೂಹಿಕ ವಿವಾಹದ ಬಗ್ಗೆ ತಿಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮದುವೆ ನೋಂದಣಿ ಮಾಡಿಸುವ ಮೂಲಕ ಇದರ ಸದುಪಯೋಗ ಪಡೆದುಕೊಳ್ಳಬೇಕು ಅಲ್ಲದೆ ಅಂದು ನಡೆಯುವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಾರ್ಯಕ್ರಮವನ್ನು ಯಶಸ್ವಿ ಗೊಳಿಸುವಂತೆ ಬಸನಗೌಡ ಬಾದರ್ಲಿ ಮನವಿ ಮಾಡಿಕೊಂಡರು.

ಈ ವೇಳೆ: ಪಕ್ಷದ ಮುಖಂಡರಾದ ಶರಣಯ್ಯಸ್ವಾಮಿ ಕೋಟೆ, ವೆಂಕಟೇಶ ನಾಯಕ, ಶರಣೇಗೌಡ ಗೊರೇಬಾಳ, ರಾಮನಗೌಡ ಬಸ್ಸಾಪೂರು, ಅಮರೇಶ ಗಿರಿಜಾಲಿ, ದಾದಾಪೀರ ಧಡೇಸೂಗೂರು, ವೀರರಾಜು ಸೇರಿದಂತೆ ಇನ್ನಿತರರು ಇದ್ದರು.

# ಎಸ್.ಎಸ್.ಎಲ್.ಸಿ.ಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನ

## ವಿದ್ಯಾರ್ಥಿಗಳು ನಿರಂತರ ಅಧ್ಯಯನಶೀಲರಾಗಬೇಕು: ಜಿಲ್ಲಾಧಿಕಾರಿ ನಿತೀಶ್ ಕೆ. ಸಲಹೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ವಿದ್ಯಾರ್ಥಿಗಳು ನಿರಂತರ ಅಧ್ಯಯನಶೀಲರಾದಾಗ ಮಾತ್ರ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉನ್ನತ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಏಪ್ರಿಲ್ 27ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿಶೇಷ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.**

ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಹೆಚ್ಚಿಸಲು ಜಿಲ್ಲೆಯ ಜಿಲ್ಲಾ ಮಟ್ಟದಿಂದ ಗ್ರಾಮೀಣ ಮಟ್ಟದವರೆಗೂ ವಿಶೇಷವಾದ ತಂಡಗಳನ್ನು ರಚಿಸಲಾಗಿತ್ತು. ಜೊತೆಗೆ ಪ್ರತಿ ತಾಲೂಕಿಗೆ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಿ, ಅಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅವರಿಗೆ ವಿಶೇಷವಾದ ಕಲಿಕಾ ಚಟುವಟಿಕೆಗಳನ್ನು ನಡೆಸಿ, ಜಿಲ್ಲೆಯ ಫಲಿತಾಂಶವನ್ನು ಸುಧಾರಿಸಲಾಗಿದೆ. ಮತ್ತು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸುವ ನಿಟ್ಟಿನಲ್ಲಿ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಅತ್ಯಂತ ಹೆಚ್ಚಿನ ಶ್ರಮ ವಹಿಸಿ ಕಾರ್ಯ ನಿರ್ವಹಿಸಿದ್ದಾರೆ ಎಂದರು. ರಾಜ್ಯಕ್ಕೆ 21ನೇ ಸ್ಥಾನದಲ್ಲಿದ್ದೇವೆ ಎಂದು ನಮ್ಮನ್ನು ನಾವು ಬೆನ್ನು




ತಟ್ಟಿಕೊಳ್ಳದೇ, ಜಿಲ್ಲೆಯ ಶೈಕ್ಷಣಿಕ ಪರಿಸ್ಥಿತಿಯನ್ನು ಸುಧಾರಿಸಲು ಇಂದಿನಿಂದಲೇ ರೂಪು ರೇಷೆಗಳನ್ನು ಹಾಕಿಕೊಳ್ಳಬೇಕಾಗಿದೆ.

ಅದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಶೈಕ್ಷಣಿಕ ಪ್ರೋತ್ಸಾಹ ನೀಡುವುದು ಅತ್ಯಗತ್ಯವಾಗಿದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೇ ನಮ್ಮಲ್ಲಿ ಶಿಕ್ಷಕರ ಕೊರತೆ ಇದ್ದು, ಈ ಸವಾಲಿನ ಮಧ್ಯೆಯೂ ಈ ಬಾರಿ ಶೈಕ್ಷಣಿಕ ಪ್ರಗತಿಯನ್ನು ಉತ್ತಮವಾಗಿ ಸಾಧಿಸಿದ್ದೇವೆ. ಇದೇ ರೀತಿ ನಿರಂತರವಾಗಿ ಶೈಕ್ಷಣಿಕ ಪ್ರಗತಿ ಹೆಚ್ಚಳಕ್ಕೆ ಎಲ್ಲಾ ಅಧಿಕಾರಿಗಳು ಶ್ರಮಿಸಬೇಕು ಎಂದರು. ಎಸ್.ಎಸ್.ಎಲ್.ಸಿ. ಎಂದರೇ ಕೇವಲ ಪ್ರೌಢ ಶಿಕ್ಷಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಇದು ಮುಂದಿನ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಹಕಾರಿಯಾಗುತ್ತದೆ. ಎಸ್.ಎಸ್.ಎಲ್.ಸಿಯಲ್ಲಿ ವಿದ್ಯಾರ್ಥಿಗಳು ಕಷ್ಟ ಪಟ್ಟು ಅಭ್ಯಾಸ ಮಾಡಿದರೆ ಮುಂದಿನ ಭವಿಷ್ಯ ಉತ್ತಮವಾಗಿರುತ್ತದೆ ಎಂದು ಸಲಹೆ ನೀಡಿದರು. ವಿದ್ಯಾರ್ಥಿಗೆ ಶತೃವೆಂದರೇ ಅದು ಮೊಬೈಲ್ ಫೋನ್ ಆಗಿದ್ದು, ಅದನ್ನು ಒಳ್ಳೆ ಕೆಲಸಗಳಿಗೆ ಮತ್ತು ಶಿಕ್ಷಣದ ವಿಚಾರವಾಗಿ ಬಳಸಿದರೇ ಮಾತ್ರ ಉಪಯೋಗವಾಗುತ್ತದೆ.

ಕೇವಲ ಸಾಮಾಜಿಕ ಜಾಲತಾಣದಲ್ಲಿ ಕಾಲಕಳೆಯುವುದರಿಂದ ಸಮಯವೂ ವ್ಯರ್ಥವಾಗುತ್ತದೆ ಎಂದರು. ವಿದ್ಯಾರ್ಥಿಗಳ ಪಾಲಕರ ಪರಿಶ್ರಮಕ್ಕೆ ಪ್ರತಿಫಲವೆಂದರೇ ಅದು ವಿದ್ಯಾರ್ಥಿ ಉತ್ತಮ ಫಲಿತಾಂಶವನ್ನು ತೆಗೆವುದು ಮಾತ್ರ ಆಗಿರುತ್ತದೆ. ಶಿಕ್ಷಣ ಇಲಾಖೆ ಈ ಬಾರಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು, ಇದೀಗ ಶಿಕ್ಷಣ ಇಲಾಖೆಯ ಜವಾಬ್ದಾರಿ ಇನ್ನೂ ಹೆಚ್ಚಾಗಿದ್ದು, ನಿರಂತರ ಶ್ರಮದಿಂದ ಕಾರ್ಯ ನಿರ್ವಹಿಸುವ ಮೂಲಕ ರಾಜ್ಯದಲ್ಲಿ ಇನ್ನೂ ಉನ್ನತ ಸ್ಥಾನಕ್ಕೆ ತಲುಪಬಹುದು, ಮುಂದಿನ ದಿನಗಳಲ್ಲಿ ಇದೇ ರೀತಿ ಶ್ರಮವಹಿಸಿ ಕೆಲಸ ಮಾಡಿದರೇ ಮೊದಲನೇ ಸ್ಥಾನಕ್ಕೆ ಬರುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಸನ್ಮಾನ: ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಮಾನ್ವಿ ತಾಲೂಕಿನ ಸುಖದೇವ (625), ಸಿಂಧನೂರಿನ ನಿಖಿಲ್ ಮೇಟಿ (622), ಲಿಂಗಸುಗೂರಿನ ಪ್ರವೀಣ್ (622), ದೇವದುರ್ಗದ ಮಲ್ಲಿಕಾರ್ಜುನ ಸ್ವಾಮಿ (622) ಹಾಗೂ ರಾಯಚೂರಿನ ಸೌಮ್ಯ ಪ್ಯಾಟಿ (619) ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ವಿದ್ಯಾರ್ಥಿಗಳ ಅನಿಸಿಕೆ: ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆದು, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ಜಿಲ್ಲೆಯ ಮಾನ್ವಿಯ ಬಿವಿಆರ್ ಪ್ರೌಢ ಶಾಲೆಯ ವಿದ್ಯಾರ್ಥಿ ಸುಖದೇವ ಅವರು ಮಾತನಾಡಿ, ಐಐಟಿ ಪದವಿ ಪಡೆದು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡುವ ಗುರಿ ಇದೆ.

ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಾಧನೆ ಮಾಡುವ ಆಶೆ ಇದೆ ಎಂದರು. ನನ್ನ ಈ ಸಾಧನೆಗೆ ತಂದೆ-ತಾಯಿ ಹಾಗೂ ಶಿಕ್ಷಕರ ಪಾತ್ರ ಹೆಚ್ಚಾಗಿದೆ. ಜಿಲ್ಲಾಡಳಿತದಿಂದ ಸನ್ಮಾನಿಸಿದ್ದು, ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೇರಣೆಯಾಗಿದೆ ಎಂದು ಶಕ್ತಿನಗರ ಕೆ.ಪಿ,ಸಿ.ಎಲ್ ಪ್ರೌಢ ಶಾಲೆಯ ವಿದ್ಯಾರ್ಥಿ ಸೌಮ್ಯ ಪ್ಯಾಟಿ ಅವರು ಅಭಿಪ್ರಾಯಪಟ್ಟರು. ಜಿಲ್ಲೆಯ ಮಾನ್ವಿಯ ಬಿವಿಆರ್ ಪ್ರೌಢ ಶಾಲೆಯ ವಿದ್ಯಾರ್ಥಿ ಸುಖದೇವ ಅವರಿಗೆ ಜಿಲ್ಲಾಧಿಕಾರಿಗಳಿಂದ 10 ಸಾವಿರ ರೂಪಾಯಿ ಚೆಕ್ ಅನ್ನು ವಿತರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವಿಜಯ ಶಂಕರ್, ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಡಿ.ಬಡಿಗೇರ, ಅಭಿವೃದ್ಧಿ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ ಭಂಡಾರಿ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇತರರು ಇದ್ದರು.

## ನೇಮಕಾತಿ ಪ್ರಕಟಣೆ

ಮೈಸೂರು ಜಿಲ್ಲಾ ನ್ಯಾಯಾಲಯದ ನೇಮಕಾತಿ 2026– 93 ಜವಾನ, ಸ್ಟೆನೋಗ್ರಾಫರ್ ಗ್ರೇಡ್–III ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 27, 2026 ಮೈಸೂರು ಜಿಲ್ಲಾ ನ್ಯಾಯಾಲಯದ ನೇಮಕಾತಿ 2026: 93 ಜವಾನ, ಸ್ಟೆನೋಗ್ರಾಫರ್ ಗ್ರೇಡ್–III ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಮೈಸೂರು ಜಿಲ್ಲಾ ನ್ಯಾಯಾಲಯದ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ರ ಮೂಲಕ ಜವಾನ, ಸ್ಟೆನೋಗ್ರಾಫರ್ ಗ್ರೇಡ್–III ಹುದ್ದೆಗಳನ್ನು ಭರ್ತಿ ಮಾಡಲು ಮೈಸೂರು ಇ–ಕೋರ್ಟ್ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಮೈಸೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಮೇ 31, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 28–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31–ಮೇ–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 02–06–2026 ಅಧಿಕೃತ ವೆಬ್‌ಸೈಟ್: mysuru.dcourts.gov.in

## ಗೌರವಧನ ಬಿಡುಗಡೆಗೆ ಆಗ್ರಹಿಸಿ ಏಪ್ರಿಲ್ 28ರಂದು ಪ್ರತಿಭಟನಾ ಧರಣಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB) ಅಕ್ಷರ ಆವಿಷ್ಕಾರ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಆರಂಭಗೊಂಡಿರುವ ಎಲ್.ಕೆ.ಜಿ (LKG), ಯುಕೆಜಿ (UKG) (ECCE) ಹಾಗೂ ದ್ವಿಭಾಷಾ (ಬೈಲಿಂಗ್ವಲ್) ತರಗತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಮತ್ತು ಆಯಾಗಳಿಗೆ ಕಳೆದ ಹತ್ತು ತಿಂಗಳಿನಿಂದ ಸಂದಾಯವಾಗದೇ ಇರುವ ಗೌರವಧನವನ್ನು ತಕ್ಷಣ ಬಿಡುಗಡೆ ಮಾಡುವಂತೆ ಆಗ್ರಹಿಸಿ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿದೆ.**

ಅತಿಥಿ ಶಿಕ್ಷಕರು ಹಾಗೂ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ನೇತೃತ್ವದಲ್ಲಿ ಇದೇ ತಿಂಗಳ 28ರಂದು ಬೆಳಿಗ್ಗೆ 10 ಗಂಟೆಗೆ ರಾಯಚೂರು ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ ಧರಣಿ ನಡೆಯಲಿದೆ. ಕಳೆದ ಹತ್ತು ತಿಂಗಳಿಂದ ಗೌರವಧನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಅತಿಥಿ ಶಿಕ್ಷಕರು ಹಾಗೂ ಆಯಾಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕುಟುಂಬ ನಿರ್ವಹಣೆ ಕಷ್ಟವಾಗಿದ್ದು, ಹಲವರು ಸಾಲ ಮಾಡಿಕೊಂಡು ಜೀವನ ಸಾಗಿಸುವ ಪರಿಸ್ಥಿತಿ ಎದು–ರಿಸುತ್ತಿದ್ದಾರೆ. ಆರ್ಥಿಕ ವರ್ಷ ಮುಕ್ತಾಯವಾಗುವ ಹಂತದಲ್ಲಿದ್ದರೂ ಗೌರವಧನ ದೊರೆಯದಿರುವುದು ಆತಂಕ ಹೆಚ್ಚಿಸಿದೆ ಎಂದು ಅವರು ತಿಳಿಸಿದ್ದಾರೆ. ಈ ಕುರಿತು ಕಳೆದ ಅಕ್ಟೋಬರ್ ತಿಂಗಳಿನಿಂದಲೇ ಬಿಇಒ, ಡಿಡಿಪಿಐ ಹಾಗೂ ಜಿಲ್ಲಾಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದು, ಜಿಲ್ಲಾಧಿಕಾರಿಗಳ ಮೂಲಕ ಕೆಕೆಆರ್‌ಡಿಬಿ ಅಧ್ಯಕ್ಷರಿಗೂ ಮನವಿ ಪತ್ರ ರವಾನಿಸಲಾಗಿದೆ. ಆದರೆ ಗೌರವಧನ ಬಿಡುಗಡೆ ಕುರಿತು ನೀಡಲಾದ ಭರವಸೆಗಳು ಇನ್ನೂ ಜಾ–ರಿಯಾಗಿಲ್ಲ ಎಂದು ಅತಿಥಿ ಶಿಕ್ಷಕರು ಆರೋಪಿಸಿದ್ದಾರೆ. “ಕೆಲಸ ಮಾಡಿದರೂ ಗೌರವಧನಕ್ಕಾಗಿ ಪರದಾಡುವ ಪರಿಸ್ಥಿತಿ ಎದುರಾಗಿದೆ. ಅನಿವಾರ್ಯವಾಗಿ ಧರಣಿ ನಡೆಸಬೇಕಾದ ಪರಿಸ್ಥಿತಿ ಬಂದಿದೆ” ಎಂದು ಸಂಘಟನೆ ಮುಖಂಡರು ತಿಳಿಸಿದ್ದಾರೆ. ಪ್ರತಿಭಟನಾ ಧರಣಿಯಲ್ಲಿ ಅತಿಥಿ ಶಿಕ್ಷಕರು ಹಾಗೂ ಆಯಾಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 7411144532, 9731492615 ಸಂಪರ್ಕಿಸಲು ಕೋರಲಾಗಿದೆ. ವಿನೋದ್ ಕುಮಾರ್ ಜಿಲ್ಲಾ ಕಾರ್ಯದರ್ಶಿ, ಎಐಡಿವೈಓ, ರಾಯಚೂರು ದತ್ತುಸ್ವಾಮಿ ಅತಿಥಿ ಶಿಕ್ಷಕರು, ರಾಯಚೂರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಶಿಕ್ಷಣದ ಜೊತೆ ಒಳ್ಳೆಯ ಸಂಸ್ಕಾರಗಳನ್ನು ಕಲಿಸಿ: ನಾವದಗಿ ಶ್ರೀ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಗ್ರಾಮೀಣ ಪ್ರದೇಶದ ಮಕ್ಕಳ ಉಜ್ವಲ ಭವಿಷ್ಯವನ್ನು ರೂಪಿಸಲು ಶ್ರಮಿಸುತ್ತಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಈ ಭಾಗದಲ್ಲಿ ಶೈಕ್ಷಣಿಕ ಕಾಂತಿಯನ್ನು ತರುತ್ತಿದೆ ಎಂದು ನಾವದಗಿ ಬೃಹನ್ಮಠದ ಷ.ಬ್ರ. ಶ್ರೀ ರಾಜ ಗುರುರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.**

ತಾಲೂಕಿನ ಬೇಲೂರ ಕ್ರಾಸ್ ಕೊಡಗಾನೂರದ ಜೆಎಸ್‌ಎಸ್ ಪ್ರಾಥ–ಮಿಕ ಮತ್ತು ಪ್ರೌಢಶಾಲೆಯಲ್ಲಿ 2025–26 ನೇ ಸಾಲಿನಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ಹಾಗೂ ವಿವಿಧ ಸ್ಪರ್ಧಾತ್ಮಕ ವಸತಿ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸೋಮವಾರ ಹಮ್ಮಿಕೊಂಡ ಸನ್ಮಾನ ಸಮಾರಂಭದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಈ ಬಾರಿಯ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಈ ಸಂಸ್ಥೆಯ ವಿದ್ಯಾರ್ಥಿನಿ ಸೌಪರ್ಣಿಕಾ ಪಾಟೀಲ ರಾಜ್ಯಕ್ಕೆ 3 ನೇ ಸ್ಥಾನ ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ ಇದಕ್ಕೆ ಈ ಸಂಸ್ಥೆಯ



ಕಾರ್ಯದರ್ಶಿ ಸಾಹೇಬಗೌಡರ ಕಳಕಳಿ ಹಾಗೂ ಶಿಕ್ಷಕರ ಪರಿಶ್ರಮ ಕಾರಣವಾಗಿದೆ ಅವರನ್ನು ನಾನು ಅಭಿನಂದಿಸುತ್ತೇನೆ.

ಮಕ್ಕಳಿಗೆ ಶಿಕ್ಷಣದ ಜೊತೆ ಒಳ್ಳೆಯ ಸಂಸ್ಕಾರಗಳನ್ನೂ ಕಲಿಸಿ. ಅವರು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳಿ, ಅವರ ಕು–ರಿತು ಹೆಚ್ಚು ಕಾಳಜಿ ವಹಿಸುವ ಅಗತ್ಯ ಪಾಲಕ–ರಿಗೆ ಇದೆ ಎಂದರು. ಜೆಎಸ್‌ಎಸ್ ಕನ್ನಡ ಮಾಧ್ಯಮ ಮುಖ್ಯ ಗುರುಗಳಾದ ವಿನಾಯಕ ಪಟಗಾರ ಹಾಗೂ ಶಶಿಕಾಂತ ಮೂಕಿಹಾಳ ಸಂಸ್ಥೆಯ ಸಾಧನೆ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯದರ್ಶಿ ಸಾಹೇಬಗೌಡ ಗಬಸಾವಳಗಿ ಅವರು ಮಕ್ಕಳ ಈ ಸಾಧನೆಗೆ ಸಂಸ್ಥೆಯ ಶಿಕ್ಷಕರ ಪರಿಶ್ರಮ ಹಾಗೂ ಮಕ್ಕಳ ಕಲಿಕಾ ಆಸಕ್ತಿಯೇ ಕಾರಣವಾಗಿದೆ ಅವರನ್ನು ನಾನು ಅಭಿನಂದಿಸುತ್ತೇನೆ.

ಸಾಧನೆ ಎಂಬುದು ಯಾರ ಸ್ವತ್ತು ಅಲ್ಲ ಕಠಿಣ ಪರಿಶ್ರಮದಿಂದ ಎಂತಹ ಸಾಧನೆಯನ್ನಾದರೂ ಮಾಡಬಹುದು ಭವಿಷ್ಯದಲ್ಲಿಯೂ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಯಶಸ್ಸನ್ನು ಸಾಧಿಸಲಿ ಎಂದರು. ಇದೇ ಸಂದರ್ಭದಲ್ಲಿ ಈ ಬಾರಿ ಎಸ್ ಎಸ್



ಎಲ್ ಸಿ ಪರೀಕ್ಷೆಯಲ್ಲಿ ಕನ್ನಡ ಹಾಗೂ ಆಂಗ್ಲ ಮಾಧ್ಯಮದಲ್ಲಿ ಉತ್ತಮ ಸಾಧನೆಗೈದ ಹಾಗೂ ನವೋದಯ, ಸೈನಿಕ ಮತ್ತು ಸ್ಪರ್ಧಾತ್ಮಕ ವಸತಿ ಶಾಲೆಗಳಿಗೆ ಆಯ್ಕೆಯಾದ ಜೆಎಸ್‌ಎಸ್ ವಿದ್ಯಾರ್ಥಿಗಳಿಗೆ, ಸಂಸ್ಥೆಯ ಮುಖ್ಯಸ್ಥರಿಗೆ, ಶಿಕ್ಷಕ ವರ್ಗಕ್ಕೆ ಹಾಗೂ ಸಿಬ್ಬಂದಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಸಿದ್ದನಗೌಡ ಗಬಸಾವಳಗಿ, ಕೊಡಗಾನೂರ ಕ್ಲಸ್ಟರ್ ಸಿ ಆರ್ ಸಿ ಸಂಗಮೇಶ ಎಂ.ಪಾಲ್ಕಿ, ಮುಖ್ಯ ಗುರುಮಾತೆ ವಿಜಯಲಕ್ಷ್ಮಿ ಸಾಹೇಬಗೌಡ ಗಬಸಾವಳಗಿ, ಪ್ರಕಾಶ ನಾಯಕ್, ರೇವಣಸಿದ್ದಪ್ಪ ಬಿ.ಗುಗ್ರಿ, ಮಾದೇವ ತಳವಾರ, ಸಂಸ್ಥೆಯ ಶಿಕ್ಷಕ ವೃಂದ, ಸಿಬ್ಬಂದಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ವಿದ್ಯಾಭಾರತಿ ಪ್ರೌಢಶಾಲೆಗೇ ಶೇ.100 ಫಲಿತಾಂಶ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಲಕ್ಷ್ಮಣ್ ಸಿಂಗ್ ಅಮರಸಿಂಗ್ ಹಜೇರಿ ವಿದ್ಯಾಭಾರತಿ ಪ್ರೌಢ ಶಾಲೆಯ ಮಕ್ಕಳು 2025–26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ. 100 ಸಾಧನೆ ಮಾಡಿದ್ದಾರೆ, ಸೌಪರ್ಣಿಕ ದೊಡಮನಿ ಶೇ.94.24 ಪ್ರಥ–ಮ, ಮಹೇಶ ಹೆಮ್ಮಡಗಿ ಶೇ. 92.64 ದ್ವಿತೀಯ ಹಾಗೂ ಮಾರುತಿ ಮಾದರ್ ಶೇ. 87.04 ತೃತೀಯ ಸ್ಥಾನ ಪಡೆದಿದ್ದಾರೆ.**



ಅದೇ ರೀತಿಯಾಗಿ ಹೆಚ್ಚು ಮಕ್ಕಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದುವ ಮೂಲಕ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ, ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಮಕ್ಕಳಿಗೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಚಿದಂಬರ ಕರಮರಕರ ಭಕ್ಷಿ ದಾದಾ ರವರು ಹಾಗೂ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಪ್ರೌಢ ವಿಭಾಗದ ಅಧ್ಯಕ್ಷರಾದ ಶ್ರೀ ಅಮರಸಿಂಗ್ (ವಿದ್ಯಾಭಾರತಿ ಪ್ರೌಢಶಾಲೆಗೇ ಶೇ.100 ಫಲಿತಾಂಶ ಬಾಬು ದಾದಾ) ಹಜೇರಿ , ಸಂಸ್ಥೆಯ ಕೋಶಾಧ್ಯಕ್ಷರಾದ ಶ್ರೀ ಶಾಮ್ ಹಂಚಾಟೆಯವರು ಹಾಗೂನಾಲ್ಕು ಪ್ರಕಲ್ಪದ ಅಧ್ಯಕ್ಷರು ಮತ್ತು ಸದಸ್ಯರು, ಹಾಗೂ ಮುಖ್ಯ ಗುರುಗಳು ಹಾಗೂ ಸಹಶಿಕ್ಷಕರಾದ ಶ್ರೀ ರಮೇಶ ಕುಲಕರ್ಣಿ ಗುರೂಜಿ , ವೆಂಕೋಬ ಗುರೂಜಿ, ಶ್ರೀಮತಿ ಸುಮಂಗಲಾ ಯಾಳವಾರ ಮಾತಾಜಿ, ಹಾಗೂ ಪ್ರೌಢ ವಿಭಾಗದ ಎಲ್ಲಾ ಸಹ ಶಿಕ್ಷಕರು ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ ಮಕ್ಕಳಿಗೆ ಸನ್ಮಾನ ಮಾಡುವ ಮೂಲಕ ಸಿಹಿ ತಿನಿಸಿ ಅಭಿನಂದನೆಯನ್ನು ಸಲ್ಲಿಸಿದರು,

# ಮೇ.1ರಿಂದ ನೂತನವಾಗಿ ಕಾಕಿನಾಡ–ಮೈಸೂರು ಎಕ್ಸಪ್ರೆಸ್ ರೈಲು ಸಂಚಾರ ಆರಂಭ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಿರಂತರವಾಗಿ ವಾರಕ್ಕೆರಡು ಬಾರಿ ಕಾಕಿನಾಡದಿಂದ ಮೈಸೂರಿಗೆ ನೂತನ ರೈಲು (ರೈಲು ಸಂಖ್ಯೆ 17289/17290) ಸಂಚಾರವನ್ನು ಮೇ.1 ರಿಂದ ಕಾಕಿನಾಡದಿಂದ ಮೇ.2 ಮೈಸೂ–ರಿನಿಂದ ಪ್ರಾರಂಭಿಸಲಾಗುವುದೆಂದು ದಕ್ಷಿಣ ಮಧ್ಯ ರೈಲ್ವೆ ತಿಳಿಸಿರುವುದಾಗಿ ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ. ಬಾಬುರಾವ್ ತಿಳಿಸಿದ್ದಾರೆ.**

ಈ ಭಾಗದ ಬಹುದಿನ ಬೇಡಿಕೆಯಾಗಿದ್ದ ಕಾಕಿನಾಡ– ಮೈಸೂರು



ಎಕ್ಸಪ್ರೆಸ್ ರೈಲು ಮೇ.1ರಿಂದ ತನ್ನ ಸೇವೆಯನ್ನು ಆರಂಭಿಸಲಿದ್ದು ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಮೂರು ರಾಜ್ಯಗಳ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಈ ರೈಲು ಸಿಕಂದರಬಾದ, ವಿಕಾರಾಬಾದ, ಯಾದಗಿರಿ, ರಾಯಚೂರು, ಗುಂತಕಲ್, ಧರ್ಮಾವರಂ, ಕೆಎಸ್ ಆರ್ ಬೆಂಗಳೂರು, ಮಂಡ್ಯ ಮಾರ್ಗವಾಗಿ ಚಲಿಸಲಿದೆ. ಕಾಕಿನಾಡ ಪಟ್ಟಣ– ಮೈಸೂರು ಎಕ್ಸಪ್ರೆಸ್ (ರೈಲು ಸಂಖ್ಯೆ17289) ಮೇ.01 ಸೋಮವಾರ ತನ್ನ ಸೇವೆ ಆರಂಭಿಸಲಿದ್ದು ಪ್ರತಿ ಸೋಮವಾರ ಮತ್ತು ಶುಕ್ರವಾರದಂದು ಕಾಕಿನಾಡ ನಿಲ್ದಾಣದಿಂದ ಬೆಳಿಗ್ಗೆ 9 ಗಂಟೆಗೆ ಹೊರಟು ಮಂಗಳವಾರ ಬೆಳಗಿನ ಜಾವ 3.48 ಅಥವಾ 3.50 ಕ್ಕೆ ಆಗಮಿಸಲಿದ್ದು ಅದೇ ದಿನ ಮಧ್ಯಾಹ್ನ 4 ಗಂಟೆಗೆ ತಲುಪಲಿದೆ.

ಅದೇ ರೀತಿಯಾಗಿ ಮೈಸೂರು ಕಾಕಿನಾಡ ಎಕ್ಸಪ್ರೆಸ್ ರೈಲು (ರೈಲು ಸಂಖ್ಯೆ 17290) ಮೇ. 2 ರಂದು ಮಂಗಳವಾರ ರಾತ್ರಿ ಹೊರಟು, ಬುಧವಾರ ಬೆಳಗಿನ ಜಾವ 4.43 ಕ್ಕೆ ಆಗಮಿಸಿ ಅದೇ ದಿನ ಸಾಯಂಕಾಲ 5.05 ನಿಮಿಷಕ್ಕೆ ತಲುಪಲಿದೆ ಎಂದು ಅವರು ತಿಳಿಸಿದ್ದಾರೆ. ಬಹದಿನಗಳ ಬೇಡಿಕೆಯಾಗಿದ್ದ ಈ ರೈಲು ಸಂಚಾರ ಆರಂಭವಾಗಿದ್ದು ಮೂರು ರಾಜ್ಯಗಳ ಪ್ರಯಾಣಿಕರು ಪ್ರಯೋಜನ ಪಡೆಯಬೇಕೆಂದು ಪತ್ರಿಕಾ ಹೇಳಿಕೆಯಲ್ಲಿ ಕೋರಿದ್ದಾರೆ.

# ವಿವಿಧ ಬೇಡಿಕೆಗಳ ಈಡೆರಿಕೆಗಾಗಿ ತಾಲೂಕು ಕೃಷಿ ಪರಿಕಾರಗಳ ಮಾರಾಟಗಾರರ ಸಂಘದಿಂದ ಮನವಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ ತಾಲೂಕು ಕೃಷಿ ಪರಿಕಾರಗಳ ಮಾರಾಟಗಾರರ ಸಂಘ ತಾ.ಘಟಕದವತಿಯಿಂದ ಕೇಂದ್ರ ಸರಕಾರಕ್ಕೆ ಕೃಷಿ ಇಲಾಖೆಯ ತಾಲೂಕು ಸಹಾಯಕ ಕೃಷಿ ನಿರ್ದೇಶಕರಾದ ಗುರುನಾಥ–ಭೂಸನೂರ ರವರ ಮೂಲಕ ಮನವಿ ಸಲ್ಲಿಸಿ ತಾಲೂಕು ಕೃಷಿ ಪರಿಕಾರಗಳ ಮಾರಾಟ ಸಂಘದ ತಾಲೂಕು ಉಪಾಧ್ಯಕ್ಷರಾದ ವೈಜಾನಾಥ ಮಾತನಾಡಿ ಸರಕಾರದಿಂದ ರೈತರಿಗೆ ನೀಡುವ ಡಿಎಪಿ,ಯೂರಿಯದ ಜೋತೆಗೆ ಇತರ ಬೇರೆ ಉತ್ಪಾದನೆಗಳನ್ನು ಲಿಂಕ್ ಮಾಡಬಾರದು.**

ಎಲ್ಲಾ ರೀತಿಯ ರಸಗೊಬ್ಬರಗಳ ಬೆಲೆಯ ಮೇಲೆ ಶೇ8 ರಷ್ಟು ಡೀಲರ್ ಗಳಿಗೆ ಲಾಭಾಂಶದೊರೆಯಬೇಕು, ರಸಗೋಬ್ಬರ,ಕೀಟನಾಶಕ,ಬೀಜಗಳ ಮಾದ–ರಿಗಳಲ್ಲಿ ಕಳಪೆ ಬಂದಾಗ ಮಾರಾಟಗಾರರನ್ನು



ಸಾಕ್ಷಿಯಾಗಿ ಪರಿಗಣಿಸಿ ಕಂಪನಿಯವರ ಮೇಲೆ ಮಾತ್ರ ಮೊಕದಮೆ ಹಾಕಬೇಕು, ಡೀಲರ್‌ಗಳಿಂದ ಸಂಗ್ರಹಿಸಿದ ಮಾದರಿಗಳಿಗೆ ಹಣಪಾವತಿಸಬೇಕು. ರೈತರಿಗೆ ರಸಗೊಬ್ಬರವನ್ನು ಎಫ್.ಐ.ಡಿ. ಮೂಲಕ ಮಾರಾಟಮಾಡುವ ಸಮಯದಲ್ಲಿ ನೀರಾವರಿ ಮತ್ತು ಖುಷ್ಕಿ ಬೇಸಾಯಗಾರರಿಗೆ ಬೆಳೆಗಳ ಅಧಾರದಲ್ಲಿ ರಸಗೊಬ್ಬರ ಪ್ರಮಾಣ ನಿಗದಿ ಮಾಡಬೇಕು. ಹಿಂಗಾರು ಬೆಳೆಗಳವರೆಗೆ ಎಫ್.ಐ.ಡಿ. ಅಧಾರದಲ್ಲಿ ಮಾರಾಟಮಾಡುವುದನ್ನು ಕಡ್ಡಾಯಗೊಳಿಸಬಾರದು.

ಬೀಜ ಮಾರಾಟ ಆಫ್ ಅನ್ನು ಮಾರಾಟ ಸ್ನೆಹಿಯಾಗಿ ರೂಪಿಸಬೇಕು ಎಂದು ಒತ್ತಾಯಿಸಿದರು.

ರಾಷ್ಟ್ರ ಕೃಷಿ ಪರಿಕಾರಗಳ ಮಾರಾಟ ಸಂಘ ವತಿಯಿಂದ ವಿವಿಧ ಬೇಡಿಕೆಗಳ ಈಡೆರಿಕೆಗಾಗಿ ಹಮ್ಮಿಕೊಳ್ಳಲಾದ ರಾಷ್ಟ್ರವ್ಯಾಪಿ ಬಂದ್‌ಗೆ ಬೆಂಬಲವಾಗಿ ತಾಲೂಕು ಕೃಷಿ ಪರಿಕಾರಗಳ ಮಾರಾಟಗಾರರು ಕೂಡ ತಾಲೂಕಿನಲ್ಲಿ ಕೃಷಿ ಪರಿಕಾರಗಳ ಮಾರಾಟವನ್ನು ಬಂದ್ ಮಾಡಿ ಬೆಂಬಲ ಸೂಚಿಸಿದರು. ಸುಬ್ಬರಾವು ಚೌಧರಿ, ವೀರಪ್ರಕಾಶ, ದ್ವಾರಕನಾಥ ಶೆಟ್ಟಿ,ಅಮರೇಗೌಡ,ರಮೇಶ,ಎಂ.ಮಲ್ಲಿಕಾರ್ಜುನ ಗೌಡ, ಶರಣಪ್ಪಗೌಡ,ಕೆ.ಎಂ.ರವಿ, ಲಕ್ಷ್ಮೀಕಾಂತರೆಡ್ಡಿ,ಮುಕ್ಕಣ್ಣ, ಸೋಮನಗೌಡ, ಬಸವನಗೌಡ, ಮಹಾದೇವಪ್ಪ ಗೌಡ ಕಟಾಲಿ, ಜಿ.ನಾಗರಾಜ, ಜೀಲಾನಿ, ಆರ್.ಹನುಮೇಶಶೆಟ್ಟಿ, ಸೂಗಯ್ಯಶೆಟ್ಟಿ,ವೈ.ಶ್ರೀನಿವಾಸ. ಜೆ.ಗುರುರಾಜ. ಪ್ರಭು ಕೋಟ್ನೆಕಲ್,ಶಾಂತಮೂರ್ತಿ ಬಾವಿಕಟ್ಟಿ ಸೇರಿದಂತೆ ತಾಲೂಕಿನ ಕೃಷಿ ಪರಿಕಾರಗಳ ಮಾರಾಟಗಾರರು ಭಾಗವಹಿಸಿದರು.

# ವಿಶ್ವ ಮಲೇರಿಯಾ ದಿನ: ತರಬೇತಿ ಕಾರ್ಯಾಗಾರ

## ಸಾರ್ವಜನಿಕರು ಯಾವುದೇ ಜ್ವರವಿರಲಿ, ತಕ್ಷಣ ರಕ್ತಲೇಪನ ಪರೀಕ್ಷೆ ಮಾಡಿಸಿ, ಮಲೇರಿಯಾ ತಡೆಗೆ ಸಹಕರಿಸಿ: ಡಾ.ಶಾಕೀರ್

**ರಾಯಚೂರು: ಸಾರ್ವಜನಿಕರು ಯಾವುದೇ ಜ್ವರವಿರಲಿ, ಮೊದಲು ರಕ್ತಲೇಪನ ಪರೀಕ್ಷೆ ಮಾಡಿಸಬೇಕು. ಇದರಿಂದ ಮಲೇರಿಯಾ ಸೇರಿದಂತೆ ಸೋಂಕಿತ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಸಾಧ್ಯವಾಗುವುದು ಎಂಬುದನ್ನು ವ್ಯಾಪಕ ಜನಜಾಗೃತಿಗಾಗಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಹಾಗೂ ಪಾಲಿಕೆ ಆರೋಗ್ಯಾಧಿಕಾರಿ ಡಾ ಮಹಮ್ಮದ್ ಶಾಕೀರ್ ಮನವಿ ಮಾಡಿದರು.**

ಇತ್ತೀಚೆಗೆ ನಗರದ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ರಾಯಚೂರು ಇವರ ವತಿಯಿಂದ ಹಮ್ಮಿಕೊಳ್ಳಲಾಗಿದ್ದ




ವಿಶ್ವ ಮಲೇರಿಯಾ ದಿನದ ಜಾಗೃತಿ ಕಾರ್ಯಕ್ರಮದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಗರದ ಎಲ್ಲ ಪ್ರದೇಶಗಳಲ್ಲಿ ಮನೆಯ ಸುತ್ತಲಿನ ಜಾಗಗಳಲ್ಲಿ ಶಾಶ್ವತ ನೀರು ನಿಲ್ಲುವ ಸ್ಥಳಗಳಿದ್ದರೆ. ನೀರು ನಿಲ್ಲದಂತೆ ನಿಗಾ ವಹಿಸಲು ಜನತೆಗೆ ಜಾಗೃತಿ ನೀಡಲು ತಿಳಿಸಿದರು. ಮುಖ್ಯವಾಗಿ ಮಲೇರಿಯಾ ಹರಡುವ ಅನಾಫೀಲಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರ್ತಿಸುವುದು, ಕೀಟ ನಾಶಕ ಸಿಂಪರಣೆಗೆ ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು.

ಜಿಲ್ಲಾ ಡಿಪಿಡಿಓ ಡಾ ಚಂದ್ರಶೇಖರಯ್ಯ ಸ್ವಾಮಿ ಅವರು ಮಾತನಾಡಿ, ಮಲೇರಿಯಾ ಜ್ವರವು ಪ್ಲಾಸ್ಮೋಡಿಯಂ ಎಂಬ ಪರಾವಲಂಭಿ ಸೂಕ್ಷ್ಮಾಣುವಿನಿಂದ ಉಂಟಾಗಬಹುದಾಗಿದ್ದು, ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಎಂದರು. ಮಲೇರಿಯಾ ರೋಗ ಲಕ್ಷಣಗಳು: ಚಳಿ, ನಡುಕ, ಬಿಟ್ಟು ಬಿಟ್ಟು ಜ್ವರ ಬರುವುದು, ವಾಕ–ರಿಕೆ, ಮೈ ಬೆವರುವುದು ಲಕ್ಷಣಗಳಾಗಿವೆ. ಈ ಲಕ್ಷಣಗಳು ಕಂಡು ಬಂದಲ್ಲಿ ಮಲೇರಿಯಾ ಜ್ವರ ಇರಬಹುದು ಎಂದು ಭಾವಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಲೇಪನ ಪರೀಕ್ಷೆಗೆ ಒಳಪಟ್ಟು ಖಚಿತಪಟ್ಟಲ್ಲಿ ಸೂಕ್ತ ಉಚಿತ ಚಿಕಿತ್ಸೆ ಪಡೆದು ಗುಣ ಹೊಂದಬಹುದಾಗಿದೆ ಎಂದು ಹೇಳಿದರು.

ನಿಯಂತ್ರಣಕ್ಕೆ ಸಹಕಾರ: ಮಲೇ–ರಿಯಾ ಪ್ರಕರಣಗಳ ತಡೆಗೆ ಮನೆಯ ಒಳಭಾಗ ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ಕೀಟನಾಶಕ ಸಿಂಪರಣೆಗೆ ಸಾರ್ವಜನಿಕರು ಸಹಕರಿಸಬೇಕು. ಸ್ವಯಂ ರಕ್ಷಣಾ ಕ್ರಮಗಳಾದ ಮಲಗುವಾಗ ಸೊಳ್ಳೆ ಪರದೆ ಬಳಕೆ ಮಾಡಬೇಕು. ಕಿಟಕಿಗಳಿಗೆ ಸೊಳ್ಳೆಗಳು ನುಸುಳದಂತೆ ಜಾಲರಿ ಅಳವಡಿಸುವುದು. ಆರೋಗ್ಯ ಇಲಾಖೆಯಿಂದ ನೀಡಲ್ಪಡುವ ಲಾರ್ವಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಉಚಿತವಾಗಿ ಪಡೆಯಬಹುದಾಗಿದೆ ಎಂದರು. ಇದೇ ಸಂದರ್ಭದಲ್ಲಿ ಪಾಲಿಕೆಯ ಪರಿಸರ ಅಭಿಯಂತರರು ಜಯಪಾಲ ರೆಡ್ಡಿ, ಬಿಹೆಚ್‌ಇಓ ಸರೋಜಾ ಕೆ, ಎಮ್‌ಟಿಎಸ್ ಸಂಧ್ಯಾ ಸೇರಿದಂತೆ ಮಹಾನಗರ ಪಾಲಿಕೆ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿಟೆಕ್ ಕೃಷಿ ಎಂಜಿನಿಯರಿಂಗ್

ಕೃಷಿ ಎಂಜಿನಿಯರಿಂಗ್ ನಾಲ್ಕು ವರ್ಷಗಳ ಅವಧಿಯ ಯುಜಿ ಪದವಿ ಕೋರ್ಸ್ ಆಗಿದ್ದು, ಕೃಷಿ ಮತ್ತು ಕೃಷಿಯೊಂದಿಗೆ ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ಅನ್ವಯಿಕೆಗಳ ಬುದ್ಧಿವಂತ ಏಕೀಕರಣದ ಮೇಲೆ ಬಲವಾಗಿ ಕೇಂದ್ರೀಕರಿಸಿದೆ. ಈ ಕೋರ್ಸ್‌ಗೆ ಪ್ರವೇಶ ಪಡೆಯಲು ಪಿಸಿಎಂ ವಿಷಯಗಳಲ್ಲಿ ಕನಿಷ್ಠ 50 ರಿಂದ 60% ಅಂಕಗಳೊಂದಿಗೆ ವಿಜ್ಞಾನ ವಿಭಾಗದಲ್ಲಿ 12 ನೇ ತರಗತಿ ಕಡ್ಡಾಯವಾಗಿದೆ. ಭಾರತದಲ್ಲಿ 300 ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳು ಬಿ ಟೆಕ್ ಕೃಷಿ ಎಂಜಿನಿಯರಿಂಗ್ ಕೋರ್ಸ್ ಅನ್ನು ನೀಡುತ್ತವೆ, ಅವುಗಳಲ್ಲಿ ಐಐಟಿ ಖರಗ್‌ಪುರ, ಐಐಟಿ ರೋಪರ್, ಕಲಾಸಲಿಂಗಂ ಅಕಾಡೆಮಿ, ಸಿಮ್ಯಾಟ್ಸ್, ವಿಜ್ಞಾನ್ ಫೌಂಡೇಶನ್, ಡಿಇಐ, ಇತ್ಯಾದಿ. ಸರಾಸರಿ ಬಿ.ಟೆಕ್ ಕೃಷಿ ಎಂಜಿನಿಯರಿಂಗ್ ಕೋರ್ಸ್ ಶುಲ್ಕ INR 7,200 ರಿಂದ INR 10.4 ಲಕ್ಷದವರೆಗೆ ಇರುತ್ತದೆ. ಬಿ ಟೆಕ್ ಕೃಷಿ ಪದವೀಧರರು ಕೃಷಿ ಮತ್ತು ಕೃಷಿ ಎಂಜಿನಿಯರ್, ಕೃಷಿ ಸಲಕರಣೆ ಎಂಜಿನಿಯರ್, ಸಂಶೋಧನೆ ಮತ್ತು ಅಭಿವೃದ್ಧಿ ವಿಜ್ಞಾನಿ, ಆಹಾರ ಉತ್ಪಾದನಾ ಎಂಜಿನಿಯರ್, ಕೃಷಿ ಅರ್ಥಶಾಸ್ತ್ರಜ್ಞ ಮುಂತಾದ ಪ್ರೊಫೈಲ್‌ಗಳಲ್ಲಿ ಉದ್ಯೋಗಾವಕಾಶಗಳನ್ನು ಅನ್ವೇಷಿಸಬಹುದು, ಆರಂಭಿಕ ವೇತನ ಸುಮಾರು INR 4 LPA ನಿಂದ INR 8 LPA ವರೆಗೆ ಇರುತ್ತದೆ. ಆಸಕ್ತಿ ಇದ್ದರೆ, ಹೆಚ್ಚಿನ ಬಿ ಟೆಕ್ ಕೃಷಿ ಎಂಜಿನಿಯರಿಂಗ್ ಕೋರ್ಸ್ ವಿವರಗಳಿಗಾಗಿ ಲೇಖನವನ್ನು ಓದುವುದನ್ನು ಮುಂದುವರಿಸಬಹುದು






## ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

### ಬೆಂಗಳೂರು :ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದು ಫೈನಾನ್ಸ್ ಕಂಪನಿ ಉದ್ಯೋಗಿ ಸಾವು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸ್ನೇಹಿತರ ಮನೆಗೆ ಹೋಗಿ ಇಂದು ಬೆಳಗಿನ ಜಾವ ಬೈಕ್‌ನಲ್ಲಿ ಹಿಂದಿರುಗುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿರುವ ಘಟನೆ ಜ್ಞಾನಭಾರತಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ವಿಜಯನಗರದ ಆರ್‌ಪಿಸಿ ಲೇಔಟ್ ನಿವಾಸಿ ಹರೀಶ್ (28) ಮೃತಪಟ್ಟ ಬೈಕ್ ಸವಾರ. ಹಿಂಬದಿ ಸವಾರ ಕೌಶಿಕ್ ಸಣ್ಣಪುಟ್ಟ ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿದ್ದಾರೆ.**



ಖಾಸಗಿ ಫೈನಾನ್ಸ್ ಕಂಪನಿಯ ಉದ್ಯೋಗಿಯಾಗಿದ್ದ ಹರೀಶ್ ನಿನ್ನೆ ರಾತ್ರಿ ಸ್ನೇಹಿತ ಕೌಶಿಕ್‌ನನ್ನು ಬೈಕ್‌ನಲ್ಲಿ ಕರೆದುಕೊಂಡು ಸ್ನೇಹಿತರನ್ನು ಮಾತನಾಡಿಸಲು ಅವರ ಮನೆಗೆ ಹೋಗಿದ್ದಾರೆ. ಇಂದು ಬೆಳಗಿನ ಜಾವ 2.20ರ ಸುಮಾರಿನಲ್ಲಿ ಇವರಿಬ್ಬರೂ ಮನೆಗೆ ಹಿಂದಿರುಗುತ್ತಿದ್ದಾಗ ಔಟರ್ ರಿಂಗ್ ರಸ್ತೆಯ ಅಂಬೇಡ್ಕರ್ ಕಾಲೇಜು ಗೇಟ್ ಸಮೀಪ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ಗಂಭೀರ ಗಾಯಗೊಂಡಿದ್ದ ಹರೀಶ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆಯೇ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.ಸಣ್ಣಪುಟ್ಟ ಗಾಯಗೊಂಡಿದ್ದ ಹಿಂಬದಿ ಸವಾರ ಕೌಶಿಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಹಿಂದಿರುಗಿದ್ದಾರೆ. ಈ ಬಗ್ಗೆ ಜ್ಞಾನಭಾರತಿ ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮೃತದೇಹವನ್ನು ಆರ್‌ಆರ್ ಆಸ್ಪತ್ರೆಗೆ ರವಾನಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಅತೀ ವೇಗದಿಂದಾಗಿ ಈ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಈ ಸಂಜೆಗೆ ತಿಳಿಸಿದ್ದಾರೆ.

### ರಸ್ತೆ, ತೋಟಗಾರಿಕೆ ಇಲಾಖೆ ಜಾಗ ಒತ್ತುವರಿ, ತೆರವಿಗೆ ಬೀದಿ ಬದಿ ಹೋರಾಟ ಸಮಿತಿ ಆಗ್ರಹ!




ನೈಜ್ಯ ದೆಸೆ ನ್ಯೂಸ್

**ನಗರದ ತೋಟಗಾರಿಕೆ ಇಲಾಖೆಯ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ಕೆಲವು ಶ್ರೀಮಂತರು ಅತಿಕ್ರಮಣ ಮಾಡಿಕೊಂಡಿದ್ದು, ಇನ್ನೂ ಮೂರ್ನಾಲ್ಕು ದಿನಗಳಲ್ಲಿ ಅತಿಕ್ರಮಣ ಮಾಡಿಕೊಂಡವರನ್ನು ಹದ್ದುಬಸ್ತಿನಲ್ಲಿ ಹಾಕಬೇಕು. ಇಲ್ಲದಿದ್ದಲ್ಲಿ ಅಧಿಕಾರಿಗಳ ವಿರುದ್ಧ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಹೋರಾಟ ಮುಖ್ಯಸ್ಥ ಡಿ.ಎಚ್.ಪೂಜಾರ ಜಿಲ್ಲೆಯ ಅಧಿಕಾರಿಗಳಿಗೆ ಸಮಿತಿ ವತಿಯಿಂದ ಗಡುವು ನೀಡಿದರು.**

ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪ್ರವಾಸಿ ಮಂದಿರದ ಎದುರುಗಡೆಯಿರುವ ತೋಟಗಾರಿಕೆ ಇಲಾಖೆಯ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ಉಳ್ಳ ಹಣವಂತರು ಅತಿಕ್ರಮಿಸಿದ್ದು, ಅದನ್ನು ತೆರವುಗೊಳಿಸಿ ಹಾಗೂ ಜಿಲ್ಲಾಧಿಕಾರಿಗಳು ಸಭೆ ನಡೆಸಬೇಕು.15 ದಿನಕ್ಕೆ ಧರಣಿ ಮುಂದುವರಿದಿದ್ದು, ಪ್ರತಿಭಟನೆ ಸ್ಥಳಕ್ಕೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಹಮ್ಮದ್ ಅಲಿಯವರು ಭೇಟಿ ನೀಡಿದ್ದರು. ಆದರೆ ಅವರು ನಮ್ಮ ಸಮಸ್ಯೆಗಳಿಗೆ ಸ್ಪಂದಿಸದೆ ಹೋಗಿದ್ದಾರೆ.

ಈ ಕುರಿತು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೀದಿ ಬದಿ ವ್ಯಾಪಾರಸ್ಥರಿಗೆ 10/10 ಜಾಗ ಬಾಡಿಗೆ ಪಡೆದು ಕೊಡುವಂತೆ ಕೇಳಿದ್ದಾರೆ. ಇದು ಸ್ವಲ್ಪ ಆಶಾದಾಯಕವಾದ ಬೆಳವಣಿಗೆಯಾಗಿದೆ ಎಂದರು. ಹೈಕೋರ್ಟ್ ಮತ್ತು ಭೂ ಕಬಳಿಕೆ ನಿಷೇಧ ನ್ಯಾಯಾಲಯ ಒತ್ತುವರಿ ತೆರವು ಗೊಳಿಸುವಂತೆ ಆದೇಶಮಾಡಿದೆ. ಅದನ್ನು ಪಾಲಿಸಬೇಕಾದ ಅಧಿಕಾರಿಗಳು ನಗರದಲ್ಲಿ ಅನೇಕ ಕಡೆಗೆ ಒತ್ತುವರಿಯಾಗಿದೆ ಅದನ್ನು ಬಿಡಿಸಲು ಯಾಕೆ ಮುಂದಾಗುತ್ತಿಲ್ಲ ಎಂದು ಪ್ರಶ್ನಿಸಿದರು. ಈ ವೇಳೆ ಎಸ್. ದೇವೇಂದ್ರಗೌಡ, ಖಾದಿಂಸಾಬ್, ಬಿ.ಎನ್.ಯರದಿಹಾಳ, ರಸೂಲ್ ಸಾಬ್, ಹುಸೇನ್ ಸಾಬ್, ಸೇರಿದಂತೆ ಅನೇಕರಿದ್ದರು.






## ಜಗತ್ತಿನ ಮೊದಲ ‘ಪಾರ್ಲಿಮೆಂಟ್’ ಅನುಭವ ಮಂಟಪ
## ಬಸವಣ್ಣನವರ ಸಮಾನತೆಯ ಸಂದೇಶ ಪೂಜಾ ಭಂಕಲಗಿ

ನೈಜ್ಯ ದೆಸೆ ನ್ಯೂಸ್

**ಚಿತ್ತಾಪುರ: ಜಗತ್ತಿನಲ್ಲಿಯೇ ಪ್ರಪ್ರಥಮ ಪಾರ್ಲಿಮೆಂಟ್ ವ್ಯವಸ್ಥೆಯನ್ನು ನಿರ್ಮಿಸಿದವರು ಬಸವಣ್ಣನವರು ಎಂದು ಲೇಖಕಿ ಪೂಜಾ ಆರ್. ಭಂಕಲಗಿ ಅಭಿಪ್ರಾಯಪಟ್ಟರು. ಬ್ರಿಟನ್ ದೇಶ ತನ್ನ ಸಂಸತ್ತನ್ನು ಮೊದಲನೆದು ಎಂದು ಹೇಳಿಕೊಳ್ಳುತ್ತಿದ್ದರೂ, ಅದಕ್ಕೂ ಮುಂಚೆಯೇ ಕರುನಾಡಿನಲ್ಲಿ ಎಲ್ಲಾ ವರ್ಗಗಳ ಶರಣರ ಅಭಿಪ್ರಾಯಗಳನ್ನು ಸಂಗ್ರಹಿಸಿ ಸಮಾನತೆಯ ಆಧಾರದ ಮೇಲೆ ಬಸವಣ್ಣನವರು “ಅನುಭವ ಮಂಟಪ”ವನ್ನು ಸ್ಥಾಪಿಸಿದ್ದರು ಎಂದು ಅವರು ಹೇಳಿದರು.**

ಪಟ್ಟಣದ ಭಾಗೋಡಿ ಗ್ರಾಮದ ಶಾಂತಲಿಂಗೇಶ್ವರ ಮಠದಲ್ಲಿ ನಡೆದ ವಿಶ್ವಗುರು ಬಸವಣ್ಣನವರ 893ನೇ ಜಯಂತ್ಯೋತ್ಸವ




ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿದ ಅವರು, ದೇಶದಲ್ಲಿ ಆರ್ಯರು ಬರುವ ಮೊದಲು ಸಮಾಜದಲ್ಲಿ ಒಗ್ಗಟ್ಟು ಇತ್ತು. ಆದರೆ ನಂತರ ಒಡೆಯುವ ಹಾಗೂ ಆಳುವ ಸಂಪ್ರದಾಯ ಬೆಳವಣಿಗೆಯಾಯಿತು ಎಂದು ಹೇಳಿದರು. ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಅವರು ಜಾತಿ ಪದ್ಧತಿ ಹಾಗೂ ಅಸಮಾನತೆ ವಿರುದ್ಧ ಹೋರಾಟ ನಡೆಸಿದ ಮಹಾನ್ ವ್ಯಕ್ತಿಗಳು. ಆದರೆ ಇಂದಿಗೂ ಆ ಅಸಮಾನತೆ ಮುಂದುವರಿಯುತ್ತಿರುವುದು ದುಃಖಕರ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗುರುಮಿಠಕಲ್‌ನ ಖಾಸಾ ಮಠದ ಶ್ರೀ ಶಾಂತವೀರ ಮುರಘರಾಜೇಂದ್ರ ಸ್ವಾಮಿಜೀ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಪ್ರಪಂಚಕ್ಕೆ ವಚನ ಸಾಹಿತ್ಯದ ಅಮೂಲ್ಯ ಸಂಪತ್ತು ನೀಡಿದ ಬಸವಣ್ಣನವರು ಸಮಾನತೆಯ ಸಮಾಜ ನಿರ್ಮಾಣಕ್ಕೆ ಮಹತ್ವದ ಕ್ರಾಂತಿ ಮಾಡಿದ್ದಾರೆ ಎಂದು ಹೇಳಿದರು. ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಭೀಮಣ್ಣ ಸಾಲಿ, ಉಪಾಧ್ಯಕ್ಷ ವೀರುಪಾಕ್ಷಪ್ಪ ಗಡ್ಡದ್ ಹಾಗೂ ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ನಾಗರಾಜ ಭಂಕಲಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ತಾಪಂ ಮಾಜಿ ಅಧ್ಯಕ್ಷ ಶರಣಬಸಪ್ಪಗೌಡ ಪಾಟೀಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು.

ರಾಯಚೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಮಹಾಂತಗೌಡ ಪಾಟೀಲ ಪ್ರಾಸ್ತಾವಿಕ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಸನ್ಮಾನಿಸಿ ಗೌರವಿಸಲಾಯಿತು. ನಂತರ ಗ್ರಾಮದಲ್ಲಿ ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಕಾರ್ಯಕ್ರಮದಲ್ಲಿ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಅಧ್ಯಕ್ಷ ದೇವಿಂದ್ರ ಅರಣಕಲ್, ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಪದ್ಮಣ್ಣಗೌಡ ಪಾಟೀಲ್, ಬಸವರಾಜ ಪಾಟೀಲ್ ದಳಪತಿ ಸೇರಿದಂತೆ ಅನೇಕ ಮುಖಂಡರು, ಅಭಿಮಾನಿಗಳು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು. ಬಸವರಾಜ ಎಂಬತ್ನಾಳ ಸ್ವಾಗತಿಸಿದರು. ಮಾಲಾಶ್ರೀ ಕಾರ್ಯಕ್ರಮ ನಿರೂಪಿಸಿ ವಂದಿಸಿದರು

ವರದಿ: ಮಹ್ಮದ್ ಅಲಿ

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.